ಕಲ್ಯಾಣ ಕಿರಣ

ಅಕ್ಟೋಬರ್-2009

ಬೆಲೆ 10.00





ಪುಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರಿಂದ ಶೂನ್ಯ ಪೀಠಾರೋಹಣ





ಕಲ್ಯಾಣ ಪರ್ವ ಉದ್ಘಾಟನಾ ಸಮಾರಂಭ:
ಧ್ವಜಾರೋಹಣ ಮಾಡುತ್ತಿರುವ ಆಂಧ್ರಪ್ರದೇಶದ ಜಹಿರಾಬಾದ್ ಕ್ಷೇತ್ರದ ಸಂಸದ ಶರಣ.ಸುರೇಶ್ ಶೆಟಕಾರ



ಕಲ್ಯಾಣ ಪರ್ವದ ಉದ್ಘಾಟಕರಾದ ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಎನ್. ಧರ್ಮಸಿಂಗ್
ಹಾಗೂ ಅವರ ಧರ್ಮಪತ್ನಿ ಪ್ರಭಾವತಿ ಮತ್ತು ಸನ್ನಿಧಿ ವಹಿಸಿರುವ ಪೂಜ್ಯ ಮಾತಾದ್ವಯರು

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಸಂಪುಟ-39 ಬಸವ ಶಕೆ -876 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-10 ಅಕ್ಟೋಬರ್-2009 ವಾರ್ಷಿಕ ಚಂದಾ 100/- ರೂ.

★ ಬಸವ ಧರ್ಮದ ಕಿರಣವಾಗಲು ಬಾ ★

ಬಾ ಭಕ್ತ ಶರಣಾಗು ಹೊಂದು ಬಸವನ ಒಲುಮೆ
ಈ ಬಸವ ಮಹಾಮನೆಯು ದಿವ್ಯ ಸ್ಫೂರ್ತಿಯ ಚಿಲುಮೆ ॥ ಪ ॥

ಕೂಡಲ ಸಂಗಮನ ದಿವ್ಯ ಸನ್ನಿಧಿಯೊಳು
ಮಂತ್ರಧ್ಯಾನವ ಗೈದು ಹರಿಯುತಿಹಳೀ ಕೃಷ್ಣೆ
ಗುರು ಬಸವನ ಚರಣ ಭಕ್ತಿಯಿಂ ತೊಳೆಯುತ
ಮಲಪ್ರಭೆಯು ಸಾಗಿಹಳು ಓಂಕಾರ ಶ್ರುತಿ ಹಿಡಿದು ॥ 1 ॥

ಅಂಗವೆನೆ ಜೀವಾತ್ಮ ಲಿಂಗವನೆ ಪರಮಾತ್ಮ
ಲಿಂಗಾಂಗ ಸಮರಸವೆ ಜೀವನದ ಗುರಿಯು
ಬಸವ ಗೀತೆಯ ಸಾರ ಇದುವೆ ಆಗಿಹುದು
ಲಿಂಗದೇವನ ಎಡೆಗೆ ಕರೆದೊಯ್ಯುತಿರುವುದು ॥ 2 ॥

ಕಲ್ಯಾಣ ಪ್ರಣತೆಯಲಿ ಭಕ್ತಿ ತೈಲವ ಉಂಡು
ಬಸವ ಜ್ಯೋತಿಯು ಅಂದು ಜನಮನವ ಬೆಳಗಿತು
ಸಂಗಮದ ಹಣತೆಯಲಿ ತ್ಯಾಗ ತೈಲವನೆರೆದು
ಬಸವ ಜ್ಯೋತಿಯ ಬೆಳಕ ಜಗಕ್ಕೆಲ್ಲ ಪಸರಿಸುವಾ ॥ 3 ॥

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು ॥ 4 ॥

- ಮಾತಾಜಿ

1. ದಕ್ಷಿಣದ ಕೃಷ್ಣೆಗೆ ಕರೆವರಯ್ಯಾ ಜನ ನೆರೆವರಯ್ಯಾ

2. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
ಜರಿಯಲು ಬೇಡ। ಅರಿದು ನೋಡುವುದು

3. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು
ಧರೆಯ ಭಕ್ತರಿಗಿನ್ನು ಅರಿಕೆ ಮಾಡುತಲಿ
ಬರೆದಿಟ್ಟ ಪತ್ರಗಳು ಜರಿಯಲು ಬೇಡ

- ಮಡಿವಾಳ ಮಾಚಿದೇವರ ಕಾಲಜ್ಞಾನ

ಕಿರಣಗನ್ನಡಿ

ಭಾವ ಚಿತ್ರಗಳ ವಿವರ

ಮುಖಪುಟ : 1. ಸಪ್ತ ಶರಣ ಗಣಾಧೀಶರು.

2. ಅಲ್ಲಮಪ್ರಭು ಶೂನ್ಯ ಪೀಠಾರೋಹಣ ಮಾಡಿ ರುದ್ರಾಕ್ಷಿ ಮುಕುಟ ಧರಿಸಿರುವ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳಿಗೆ ಪೂಜ್ಯ ಮಾತಾಜಿಯವರಿಂದ ಪುಷ್ಪವೃಷ್ಟಿ.

3. ಶರಣೆಯರಿಂದ ಪೂಜ್ಯ ಶ್ರೀಗಳಿಗೆ ಆರತಿ.

ಹೊದ್ದಿಕೆಯ ನಾಲ್ಕನೆಯ ಪುಟ :

1. ಬಸವ ಕಲ್ಯಾಣದ ಮುಖ್ಯರಸ್ತೆಯಲ್ಲಿ ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳಿಂದ ಮತ್ತು ಶರಣ -ಶರಣೆಯರಿಂದ ಪಥ ಸಂಚಲನ.

2.ಅ.ಬೃಹತ್ ಮೆರವಣಿಗೆ ಮತ್ತು 2.ಆ. ಪರುಷ ಕಟ್ಟೆಯಲ್ಲಿ ಪೂಜೆ.

3. ಸಭೆಯಲ್ಲಿ ಆಸೀನರಾದ ಶರಣ ಸಮೂಹ.

ಹೊದ್ದಿಕೆಯ ಎರಡನೆಯ ಪುಟ :

1. ಜಹೀರಾಬಾದ್ ಕ್ಷೇತ್ರದ ಸಂಸತ್ ಸದಸ್ಯ ಸುರೇಶ ಶೆಟಕಾರರಿಂದ ಬಸವ ಧ್ವಜಾರೋಹಣ. ದಿ. 2-10-2009.

2. ಉದ್ಘಾಟಕರಾದ ಶ್ರೀ.ಎನ್. ಧರ್ಮಸಿಂಗ್ ಮತ್ತು ಶ್ರೀಮತಿ ಪ್ರಭಾವತಿ ಧರ್ಮಸಿಂಗ್

ಹೊದ್ದಿಕೆಯ ಮೂರನೆಯ ಪುಟ :

1. ಸಮುದಾಯ ಪ್ರಾರ್ಥನೆ ಮತ್ತು ಶರಣ ವಂದನೆಯಲ್ಲಿ ನಿರತರಾದ ಪೂಜ್ಯರು ಹಾಗೂ ಶರಣರು.

2. ಅವರಾದ ಶಾಸಕ ಶ್ರೀ ಪ್ರಭು ಚವ್ಹಾಣರಿಂದ ದಿ.4ರಂದು ಸಮಾರೋಪ ಸಮಾರಂಭದ ಉದ್ಘಾಟನೆ.

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9036351066, 9620058492



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಇಪ್ಪತ್ಮೂರನೆಯ

ಶರಣ ಮೇಳ

2010ರ ಜನವರಿ 11, 12, 13, 14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತಿದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮವನ್ನು ಲಿಂಗಾಯತ(ಬಸವ) ಧರ್ಮೀಯರ ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14, 15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟ ಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹವನ್ನು ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ಮೂರನೆಯ ಶರಣ ಮೇಳವು 2010ರ ಜನವರಿ 11, 12, 13, 14ಮತ್ತು 15ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಿಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ. [ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯ ವಿಧಿಯಾಗಿರುತ್ತದೆ.] ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40, 30, 20 ಮತ್ತು 10 ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗ ಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ.ದಿ. 11 ಮತ್ತು 12 ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ-ಧರ್ಮಗಳಿಗೆ ಸಂಬಂಧಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಾರು ಬೇಕಾದರೂ ಚಿಂತನ ಗೋಷ್ಠಿಯಲ್ಲಿ ಪಾಲ್ಗೊಳ್ಳಬಹುದು.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ, ಹೊರರಾಜ್ಯಗಳಿಂದಲೂ ಶರಣ ವ್ರತಿಗಳು ಆಗಮಿಸುವರು. ಜನವರಿ ದಿ.10ನೆಯ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ

ವ್ಯವಸ್ಥೆ ಮಾಡಲಾಗುವುದು. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು 4. ಹಿತೈಷಿಗಳು : 500 ರೂ.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು. 5. ಸ್ವಾಗತ ಸಮಿತಿ ಸದಸ್ಯತ್ವ: 250 ರೂ.
3. ದಾನಿಗಳು: 1000 ರೂ. ಮತ್ತು ಮೇಲೆ ಕೊಟ್ಟವರು. 6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್ ಚೆಕ್ಕುಗಳನ್ನು "ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ"ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of Indiaದ Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲಿ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ, ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧ ಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ, ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ. ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಒಮ್ಮೆಯಾದರೂ ಶರಣ ಮೇಳದ (ಜನವರಿ 14 ರಂದು ನಡೆಯುವ)ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ, ಗಣಲಿಂಗ ದರ್ಶನ ಪಡೆದು ತನ್ನ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷ ಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ,
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ
ದೂ : 08351-268014/268007/268140

ಸಂಪಾದಕೀಯ : - ಮಾತಾಜಿ

ನ್ಯಾಯ ಎಲ್ಲಿದೆ ?

ಎಂಟನೆಯ ಕಲ್ಯಾಣ ಪರ್ವವು ಯಶಸ್ವಿಯಾಗಿ 2009ರ ಅಕ್ಟೋಬರ್ 2, 3 ಮತ್ತು 4ರಂದು ನಡೆಯಿತು. ಮೋಡಕ್ಕೆ ತೂತು ಬಿದ್ದಂತೆ ಮಳೆಯು ಧಾರಾಕಾರವಾಗಿ ಸುರಿಯುತ್ತಿದ್ದರೂ ಯಾವೊಂದು ಕಾರ್ಯಕ್ರಮವೂ ಚ್ಯುತಿ ಇಲ್ಲದಂತೆ ನಡೆದವು. ಕಾರ್ಯಕ್ರಮದ ಸಮಯಕ್ಕೆ ಸರಿಯಾಗಿ ಮಳೆಯು ಬಿಡುವು ಕೊಡುತ್ತಿದ್ದುದು ಒಂದು ವಿಶೇಷ. ವೇದಿಕೆ ಮತ್ತು ಮುಂಭಾಗದಲ್ಲಿ ತಗಡು ಹಾಕಿದ್ದರಿಂದ ಜನರು ಅದರ ಕೆಳಗೆ ತೊಯ್ಯದೆ ಕುಳಿತುಕೊಳ್ಳಲು ಸಾಧ್ಯವಾಗುತ್ತಿತ್ತು. ನೆಲವು ಕೆಸರಾಗುತ್ತಿದ್ದುದರಿಂದ ಕೆಳಗೆ ಕೂರಲು ಆಗದ್ದರಿಂದ ಪೆಂಡಾಲ್ ಪೂರ್ತಿ ಕುರ್ಚಿಗಳನ್ನೇ ಹಾಕಿಸಿಬಿಟ್ಟೆವು.

ಆದರೆ ಜನರ ಭಕ್ತಿ, ನಿಷ್ಠೆಗಳನ್ನು ಎಷ್ಟು ಕೊಂಡಾಡಿದರೂ ಸಾಲದು. ಬೇರೆ ಊರುಗಳಿಂದ ಬರುವವರು ಮಾರ್ಗ ಮಧ್ಯೆ ಹಳ್ಳಗಳು ಹರಿದಿದ್ದರಿಂದ ವಾಪಸ್ಸಾಗಬೇಕಾಯಿತು. ಟ್ರೇನುಗಳು ರಾಯಚೂರಿಗೇ ನಿಂತು ಬಿಟ್ಟವು. ಮಳೆ ಎಡಬಿಡದೆ ಸುರಿಯುತ್ತಿತ್ತು. ವಾಸಕ್ಕಾಗಿ ಹಾಕಿದ ಟೆಂಟುಗಳು ನೆಲ ಹಸಿಯಾದ್ದರಿಂದ ಉಪಯೋಗಕ್ಕೆ ಬಾರದೇ ಹೋದವು. ಇಷ್ಟು ಸಂಕಷ್ಟಗಳ ಮಧ್ಯೆಯೂ ಹಿಂದಿನ ವರ್ಷಕ್ಕಿಂತ ಜಾಸ್ತಿ ಜನ ಬಂದರು ಮತ್ತು ಬಸವ ಕಲ್ಯಾಣದ ನಾಗರಿಕರು ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಗಳಾದರು, ದಾಸೋಹದ ಕಾಣಿಕೆ ಸಹ ನೀಡಿದರು. ಇದನ್ನು ನೋಡಿದಾಗ "ಬಸವಣ್ಣನ ಪುಣ್ಯದ ಲೀಲೆ ಲೀಲೆ ಹೊ" ಎಂಬ ಹರಿಹರ ಕವಿಯ ಮಾತು ಸತ್ಯವೆನಿಸುತ್ತದೆ. ಕಲ್ಯಾಣಪರ್ವದ ಈ ಉತ್ಕರ್ಷವನ್ನು ಕಂಡು ಮತ್ಸರಿಗರ ಹೊಟ್ಟೆಯ ಕಿಚ್ಚು ಹೆಚ್ಚಾಗದಿದ್ದೀತೆ?

ದಿನ ಪತ್ರಿಕೆಗಳು ಬೀದರ್, ಗುಲಬರ್ಗಾ ಪ್ರಾದೇಶಿಕ ಸಮಾಚಾರವನ್ನಾಗಿ ಕಲ್ಯಾಣ ಪರ್ವದ ವಿವರಗಳನ್ನು ಚಿತ್ರ ಸಹಿತವಾಗಿ ಪ್ರಕಟಿಸಿದವು. ಎಲ್ಲವೂ ಸುಸೂತ್ರವಾಗಿ ಜರುಗಿತು. ಇದರಿಂದ ಕೊಂಡೆಯ ಮಂಚಣ್ಣ ಮತ್ತು ಬಿಜ್ಜಳರಾಜನ ಸೇನಾಧಿಪತಿ ಮಾಧವರಾಯನ ಸಂತತಿಯವರಿಗೆ ಎಷ್ಟು ಸಂಕಟವಾಗಿರಲಿಕ್ಕಿಲ್ಲ? ಅವರಿಗೆ ಏನಾದರೂ ಕಿತಾಪತಿ ಮಾಡದಿದ್ದರೆ ಸಮಾಧಾನವಿರದು. ಅಮಂಗಲದ ಕೆಲಸ ಮಾಡುವುದು ಅವರ ರಕ್ತಗತ ಗುಣ.

ದಿ. 4-10-2009 ರಂದು ಹಾಕಿಕೊಂಡ ಕಾರ್ಯಕ್ರಮ ಎರಡು. ಒಂದು ಮೆರವಣಿಗೆ-ಪಥ ಸಂಚಲನ ಮತ್ತು ಸಮಾರೋಪ ಸಮಾರಂಭ. ಬೆಳಿಗ್ಗೆ ಸ್ನಾನ ಪೂಜೆ ಉಪಾಹಾರ ಮುಗಿಸಿ ಶರಣರು ಮೆರವಣಿಗೆಗಾಗಿ ಹೊರಟರು. ಪೋಲೀಸ್ ಇಲಾಖೆಯ ಅಧಿಕಾರಿಗಳು ಮೆರವಣಿಗೆಗೆ ಒಪ್ಪಿಗೆಯನ್ನು ನೀಡಿ, ಸಹಕರಿಸುವುದಾಗಿ ಹೇಳಿದರು. ಕೋಟೆಯಿಂದ ಹೊರಟ ಮೆರವಣಿಗೆ - ಪಥ ಸಂಚಲನ ಚೆನ್ನಾಗಿ ಸಾಗಿತು. ಪ್ರತಿ ವರ್ಷದಂತೆ ಪರುಷ ಕಟ್ಟೆಯಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ಗುರು ಬಸವಣ್ಣನವರಿಗೆ ಪೂಜೆ ಸಲ್ಲಿಸಿ, ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು ಹೊರಟರು. ಪರುಷ ಕಟ್ಟೆಯ ರಸ್ತೆ ಮತ್ತು ಪರಿಸರ ತೀರಾ ಕಿರಿದಾಗಿರುವುದರಿಂದ ಕೆಲವೇ ಜನರೊಡನೆ ಜಂಗಮ ಮೂರ್ತಿಗಳು ಹೋಗಿದ್ದು ಜ್ಯೋತಿಯನ್ನು ಹಚ್ಚಿಕೊಂಡು ಬಂದು ಮುಖ್ಯ ರಸ್ತೆಯಲ್ಲಿ ಮೆರವಣಿಗೆಯಲ್ಲಿ ಸೇರಿಕೊಂಡರು. ತುಂಬಾ ಶಾಂತವಾಗಿ ಸಾಗುತ್ತಿತ್ತು. ಅದರ ಸಂಭ್ರಮವನ್ನು ನಾನು ಸಹ ನೋಡುವುದಲ್ಲದೆ ಸ್ವಲ್ಪ ದೂರವಾದರೂ ಮೆರವಣಿಗೆಯಲ್ಲಿ ಪಾಲ್ಗೊಳ್ಳಬೇಕೆಂದು ಬಯಸಿ ಫೋನ್ ಮಾಡಿದರು. ನನಗೆ ಕಾಲು ನೋವಿನಿಂದ ನಡೆಯಲು ಆಗುವುದಿಲ್ಲ ಎಂದು ಹೋಗಿರಲಿಲ್ಲ. ನನ್ನನ್ನು ಕರೆತರಲು ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳನ್ನು ಕಳಿಸಿದರು. ಅವರು ಮಹಾರಾಷ್ಟ್ರದಿಂದ ಬಂದಿದ್ದ ಭಕ್ತರೋರ್ವರ ಗಾಡಿಯಲ್ಲಿ ಬಂದು ಪೂಜ್ಯ ಗಂಗಾಮಾತಾಜಿ ಕರೆಯುತ್ತಿರುವುದಾಗಿ ತಿಳಿಸಿದರು. ನಮ್ಮ ಕಾರಿನಲ್ಲಿ ನಾನು ಕುಳಿತೆ. ಮುಂದೆ ಮಹಾರಾಷ್ಟ್ರದವರ ಕಾರಿನಲ್ಲಿ ಸ್ವಾಮೀಜಿ ಇದ್ದರು. ಅಂಬೇಡ್ಕರ್ ವೃತ್ತಕ್ಕೆ ಬಂದಾಗ, ಗೋಪಾಲ ರಾಠೋಡ ಎಂಬ ಟ್ರಾಫಿಕ್ ಪೋಲೀಸ್ ಇನ್ಸ್‌ಪೆಕ್ಟರ್ ಗಾಡಿಗಳಿಗೆ ಬೇರೊಂದು ಕಡೆ ಕೈ ತೋರಿಸಿದರು. ಅವರಿಗೆ ವಿಷಯ ಮನವರಿಕೆ ಮಾಡಲು ಸ್ವಾಮೀಜಿ ಕೆಳಗಿಳಿದರು. "ಮಾತಾಜಿಯವರು ಗಾಡಿಯಲ್ಲಿದ್ದಾರೆ. ಮೆರವಣಿಗೆಗೆ ಹೋಗಲು ಬಂದಿದ್ದಾರೆ." ಎಂದು ಎದುರಿನಿಂದ ಬರುತ್ತಿದ್ದ ಮೆರವಣಿಗೆ ಕಡೆಗೆ ಕೈ ತೋರಿಸಿದರು. ಬಿಡುವುದಿಲ್ಲ ಎಂದು ಒರಟಾಗಿ ರಾಠೋಡ ಹೇಳಿದರು. ಪೂಜ್ಯ ಸಿದ್ಧರಾಮ ಸ್ವಾಮಿಗಳು "ಅದೇಕೆ ಬಿಡುವುದಿಲ್ಲ;

ನಾವು ಧರಣಿ ಕೂರುತ್ತೇವೆ.'' ಎಂದರು. ಅಷ್ಟರಲ್ಲಿ ಹತ್ತಾರು ಶರಣ ಶರಣೆಯರು ಸೇರಿದರು. ಈ ವಾಗ್ವಾದ ಕಂಡು ಬೇರೆ ಪೋಲೀಸ್ ಅಧಿಕಾರಿಗಳು ಓಡಿ ಬಂದು ನಮ್ಮ ಕಾರನ್ನು ಮುಂದೆ ಬಿಡಲು ತಿಳಿಸಿದರು. ನಮ್ಮ ಕಾರು ಮುಂದೆ ಸಾಗಿತು. ನಾನು ಇಳಿದು ಮೆರವಣಿಗೆಯಲ್ಲಿ ಕೂಡಿಕೊಂಡೆ. ನಾವು ಅಂಬೇಡ್ಕರ್‌ಗೆ ಮಾಲಾರ್ಪಣೆ ಮಾಡುತ್ತಲಿರುವಾಗ ಜನರು ಓಡಿ ಬಂದು ''ರಾಠೋಡ್ ಸಿದ್ಧರಾಮ ಸ್ವಾಮಿಗಳಿಗೆ ಸಿಕ್ಕಾಪಟ್ಟೆ ಹೊಡೆಯುತ್ತಿದ್ದಾನೆ. ತಲೆಗೆ ಏಟಾಗಿ ರಕ್ತ ಸುರಿಯುತ್ತಿದೆ'' ಎಂದು ಗಾಬರಿಯಿಂದ ಹೇಳಿದರು. ನಮಗೆ ವಿಚಿತ್ರವೆನಿಸಿ ದಿಗ್ಭ್ರಾಂತಿಯಾಯಿತು.

ಬಸವ ಕಲ್ಯಾಣ ಪೋಲೀಸರ ವಿಲಕ್ಷಣ ವರ್ತನೆ

ಬಸವ ಕಲ್ಯಾಣ ನಗರದ ಮಧ್ಯೆ ಅಶ್ವಾರೂಢ ಬಸವಣ್ಣನವರ ಒಂದು ಪುತ್ಥಳಿ ಇದೆ. ಅಲ್ಲಿ ಮಾಲಾರ್ಪಣೆ ಮಾಡಿದರೇನೆ ನಮಗೇನು ಕಿರೀಟ ಏರುವುದಿಲ್ಲ. ಅಲ್ಲಿಂದ ಮುಂದೆ ಸಾಲಾಗಿ ಅಂಬೇಡ್ಕರ್ ಚೌಕ -ಪುತ್ಥಳಿ, ಶಿವಾಜಿ ಚೌಕ - ಭಾವಚಿತ್ರ (ಈಗ ಅದು ಚೆನ್ನಾಗಿ ಆಗುತ್ತಿದೆ.), ಮಡಿವಾಳ - ಮಾಚಿದೇವ ಚೌಕ -ಮೂರ್ತಿ, ಹರಳಯ್ಯ ಚೌಕ -ಮೂರ್ತಿ ಇವೆ. ಎಲ್ಲಕ್ಕೂ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿ ಸಾಗುತ್ತೇವೆ. ಉಳಿದೆಲ್ಲರಿಗೆ ಗೌರವ ಸಲ್ಲಿಸಿ ಬಸವ ಕಲ್ಯಾಣದ ಅಧಿನಾಯಕ ಗುರು ಬಸವಣ್ಣನವರಿಗೆ ಸಲ್ಲಿಸದಿರುವುದು ಅಪಚಾರವಾಗದೆ? ಎಂದು ಮಾಲಾರ್ಪಣೆ ಮಾಡಬೇಕೆಂದು ಶರಣರ ಅಭಿಲಾಷೆ. ತಮ್ಮ ಸ್ವಂತ ಸೊತ್ತೇನೋ ಎಂಬಂತೆ ಕೆಲವು ಜನರು ಅದಕ್ಕೆ ಮಾಲಾರ್ಪಣೆ ಮಾಡಗೊಡಬಾರದೆಂದು ಗಲಾಟೆ ಎಬ್ಬಿಸುವರು. ಅಂಥ 4-6 ಜನ ಅವಿವೇಕಿಗಳನ್ನು ನಿಯಂತ್ರಿಸಲಾರದಷ್ಟು ಅಶಕ್ತವಾಗಿದೆ ಪೋಲೀಸ್ ಇಲಾಖೆ. ಆ ಜಾಗದಲ್ಲಿ ನಾಲ್ಕಾರು ಪೋಲೀಸ್ ವಾಹನಗಳನ್ನು ಅಡ್ಡ ನಿಲ್ಲಿಸುವುದು ಹತ್ತಾರು ಪೋಲೀಸರು ಕಾವಲು ನಿಲ್ಲುವುದು ನೋಡಿದರೆ ವಿಚಿತ್ರವೆನಿಸುತ್ತದೆ. ಈ ಸಲ ನಮ್ಮ ಶರಣರು ಅತ್ತ ಕಡೆ ತಿರುಗಿಯೂ ನೋಡದೆ ಮುಂದೆ ಬಂದಿದ್ದಾರೆ. ಆಗ ಕೆಲವರು ಪೋಲೀಸ್ ಅಧಿಕಾರಿಗಳು, ''ನಮಗೆ ನಿರಾಳವಾಯಿತು. ಇನ್ನೇನು ಚಿಂತೆಯಿಲ್ಲ'' ಎಂದು ನಮ್ಮ ಕಾರ್ಯಕರ್ತರ ಮುಂದೆ ಹೇಳಿದರಂತೆ.

ಅಂಬೇಡ್ಕರ್ ಚೌಕದಲ್ಲಿ ವಿನಾ ಕಾರಣ ಗೋಪಾಲ ರಾಠೋಡ ಸ್ವಾಮೀಜಿಯವರನ್ನು ಕೆಳಗಿಳಿಸಿ ತನ್ನ ಸಹಾಯಕರಿಗೆ ಲಾಠಿಯಿಂದ ಹೊಡೆಯಲು ಹೇಳಿ ತಾನು ವಾಕಿಟಾಕಿಯಿಂದ ಕುಕ್ಕಿ ತಲೆಗೆ ಗಾಯವಾಗುವಂತೆ ಹೊಡೆದಿದ್ದಾರೆ. ಆತ ಮತ್ತು ಮೂವರು ಪೋಲೀಸ್ ಪೇದೆಗಳೂ ಇದರಲ್ಲಿ ಭಾಗಿಯಾಗಿದ್ದಾರೆ. ಬಹಳ ಜನ ಸೇರಿದ್ದಲ್ಲದೆ ಆ ರಕ್ಕಸರ ಕೈಯಿಂದ ಬಿಡಿಸಿದ್ದಾರೆ. ಕೆಲವು ಶರಣರು ಆ ಅಧಿಕಾರಿಯನ್ನು ಸಹಚರರನ್ನು ಬೆನ್ನು ಹತ್ತಿದ್ದಾರೆ. ಆಗ ಒಂದು ಸಂದಿಯಲ್ಲಿ ಓಡಿದ್ದಲ್ಲದೆ ಯಾರ ಮನೆಯಲ್ಲೋ ಅವರು ಬಚ್ಚಿಟ್ಟುಕೊಂಡಿದ್ದಾರೆ. ಸ್ವಾಮಿಗಳನ್ನು ಹೊಡೆದಿರುವುದನ್ನು ಕೇಳಿ ''ಮೊದಲು ಸ್ವಾಮೀಜಿಯವರನ್ನು ವೈದ್ಯರ ಬಳಿಗೆ ಕರೆದುಕೊಂಡು ಹೋಗಿರಿ. ತಡಮಾಡಬೇಡಿರಿ'' ಎಂದು ನಾನು ಹೇಳಿದೆ. ಮೆರವಣಿಗೆಯಲ್ಲಿದ್ದ ಜನರೆಲ್ಲ ಒಂದು ಗೂಡಿ ''ಇದು ಅನ್ಯಾಯ. ಆತ ಸಸ್ಪೆಂಡ್ ಆಗಲೇಬೇಕು.'' ಎಂದು ನನ್ನನ್ನೂ ತಡೆದರು. ಕಾರಿನಲ್ಲಿ ಕುಳಿತುಕೊಂಡೆ. ಅಷ್ಟರಲ್ಲಿ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಅಸಿಸ್ಟೆಂಟ್ ಕಮೀಷನರ್ ಬಂದು, ''ಇಂಥ ಘಟನೆ ನಡೆಯಬಾರದಿತ್ತು. ಪೋಲೀಸ್ ಇನ್ಸ್‌ಪೆಕ್ಟರನದು ತಪ್ಪಾಗಿದೆ. ದುಡುಕಿದ್ದಾರೆ. ಅವರ ಪರವಾಗಿ ನಾವು ಕ್ಷಮೆ ಕೇಳುತ್ತೇವೆ. ನಿಮ್ಮ ಜನರನ್ನು ಸಮಾಧಾನ ಮಾಡಿ ಮುಂದೆ ಕಳಿಸಿರಿ'' ಎಂದರು. ''ಇಲ್ಲ, ಆತ ಬಂದು ಕ್ಷಮೆ ಕೇಳಬೇಕು.'' ಎಂದು ಜನರ ಪಟ್ಟು. ''ಬೇಡ, ಜನರ ಮಧ್ಯೆ ಆತ ಬಂದರೆ ಜನರು ಏನು ಮಾಡುತ್ತಾರೆಂದೇ ಹೇಳಲಾಗುವುದಿಲ್ಲ'' ಎಂದು ಅಧಿಕಾರಿಗಳ ಮನವಿ. ಆಗ ಎಸ್.ಪಿ. ಅವರಿಂದ ಫೋನ್ ಬಂದಿತು. ''ಆತ ತಪ್ಪು ಮಾಡಿದ್ದಾನೆ. ಆದರೆ ಈಗ ವಿನಾ ಕಾರಣ ಗದ್ದಲ ಬೇಡ. ನಿಮ್ಮ ಜನರನ್ನು ಸಮಾಧಾನ ಮಾಡಿ ಮೆರವಣಿಗೆ ಮುಂದುವರಿಸಿರಿ. ನಾವು ಕ್ರಮ ತೆಗೆದುಕೊಳ್ಳುತ್ತೇವೆ.'' ಎಂದರು.

''ಎಸ್.ಪಿ.ಯವರು ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದ್ದಾರೆ. ಈಗ ಸಮಾಧಾನಗೊಂಡು ಮುಂದೆ ನಡೆಯಿರಿ. ಮುಂದಿನ ಕಾರ್ಯಕ್ರಮವು ಸಾಂಗವಾಗಿ ನೆರವೇರಬೇಕು.'' ಎಂದು ಹೇಳಿದೆ. ಆಗ ಮೆರವಣಿಗೆ ಮುಂದೆ ಸಾಗಿತು. ಅಷ್ಟರಲ್ಲಿ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರ ಗಾಯಗಳಿಗೆ ಹೊಲಿಗೆ ಹಾಕಿಸಿಕೊಂಡು ಕರೆದುಕೊಂಡು ಬಂದರು. ಅವರು

ಸ್ನಾನ -ಪೂಜೆ ಮಾಡಿ ಬಂದರು. ಅಲ್ಲಮ ಪ್ರಭು ಶೂನ್ಯಪೀಠಾರೋಹಣವು ಸಾಂಗವಾಗಿ ನೆರವೇರಿತು. ಭಕ್ತರು ಮಾಲಾರ್ಪಣೆ ಮಾಡಿ ಕಾಣಿಕೆ ಸಲ್ಲಿಸಿದರು. ಸಮಾರೋಪ ಸಮಾರಂಭವು ಸುಸೂತ್ರವಾಗಿ ಜರುಗಿತು. ಕಾರ್ಯಕರ್ತರಿಗೆಲ್ಲ ಸತ್ಕಾರ ಮಾಡಲಾಯಿತು. ಹಿಂದಿನ ವರ್ಷಗಳಿಗಿಂತಲೂ ಹೆಚ್ಚಿನ ಜನರು ಅಂಥ ಮಳೆಯಲ್ಲೂ ಪಾಲ್ಗೊಂಡರು. ಜನರ ಬಸವ ಭಕ್ತಿ, ಶ್ರದ್ಧೆ ಅಸದಳ. ಅಂಥ ವೈಭವವನ್ನು ಪುನಃ ಕಲ್ಯಾಣ ಕಾಣುತ್ತಿದೆ. ಕರುಳ ಕ್ಯಾತಯ್ಯನವರ ಕಾಲಜ್ಞಾನದಂತೆ, ''ಕಲ್ಯಾಣ ನಲಿವಂತೆ ಬಲಬಂತು ಎಮಗೆ.'' ಆದರೆ ಇಂತಹ ವೈಭವವನ್ನು, ಶರಣರ ಆಗಮನವನ್ನು ಕಂಡು ಸಂತೋಷಪಡದ ಕೆಟ್ಟ ಮತ್ತು ಕ್ರೂರ ಮನಸ್ಸುಗಳ ಬಗ್ಗೆ ಏನೆನ್ನಬೇಕು? 12ನೇ ಶತಮಾನದ ವಿರೋಧಿಗಳು ಲಿಂಗಾಯತೇತರ ಪುರೋಹಿತ ವರ್ಗದವರು; ಈಗಿನ ವಿರೋಧಿಗಳು ಲಿಂಗಾಯತರು. ಇದೊಂದು ವಿಪರ್ಯಾಸ. ಮುಸಲೀಮರು, ದಲಿತರು, ಹಿಂದುಳಿದ ವರ್ಗ ಗಳವರು, ಮರಾಠರು ಎಲ್ಲರೂ ಸಹಕರಿಸಿದ್ದಾರೆ. ಮೂರು ನಾಲ್ಕು ಜನ ಪತ್ರಿಕಾ ಹೇಳಿಕೆ ಕೊಡುವ ಶೂರರು ಬಿಟ್ಟರೆ ಉಳಿದಂತೆ ಬಸವ ಕಲ್ಯಾಣದ ಲಿಂಗಾಯತರು ತನು ಮನ ಧನಗಳಿಂದ ಸಹಕಾರ ನೀಡಿದ್ದಾರೆ.

ಮಾಧ್ಯಮಗಳ ಪಾತ್ರ

ಅಪೂರ್ವ ಯಶಸ್ಸಿನ ಕಲ್ಯಾಣ ಪರ್ವದ ವರದಿಯನ್ನು ಕೇವಲ ಗುಲಬರ್ಗಾ ವಿಭಾಗಕ್ಕೆ ಸೀಮಿತಗೊಳಿಸಿದ ಪತ್ರಿಕೆಗಳು ಪೂಜ್ಯ ಸಿದ್ಧರಾಮ ಸ್ವಾಮಿಗಳ ಮೇಲೆ ಪೋಲೀಸ್ ಅಧಿಕಾರಿ ಮಾಡಿದ ಹಲ್ಲೆಯನ್ನು ರಾಜ್ಯ ಮಟ್ಟದ ಸುದ್ದಿ ಮಾಡಿದರು. ಇದರಿಂದ ಮಳೆ, ಪ್ರವಾಹಗಳಿಂದ ಮತ್ತಿತರ ಕಾರಣಗಳಿಂದಾಗಿ ಕಲ್ಯಾಣ ಪರ್ವಕ್ಕೆ ಬರಲಾಗದವರು ಗಾಬರಿಗೊಳ್ಳುವಂತೆ ಮಾಡಿದರು. ಇದು ಕೆಲವು ಜನರು ಬೇಸರಗೊಳ್ಳಲು ಕಾರಣವಾಯಿತು. ಆದರೆ ಇದನ್ನು ವಿಧಾಯಕವಾಗಿ ವಿಮರ್ಶಿಸಿದರೆ ಪೋಲೀಸ್ ದೌರ್ಜನ್ಯವನ್ನು ಪತ್ರಿಕೆಗಳು ಮತ್ತು ಜಾಗದಲ್ಲಿ ಉಪಸ್ಥಿತರಿದ್ದ ಟಿ.ವಿ.ವಾಹಿನಿಗಳು ಪ್ರಾಮಾಣಿಕವಾಗಿ ಬಯಲು ಮಾಡಿದವು. ಮೂರ್ಖನು, ಮುಂಗೋಪಿಯೂ ಆದ ಓರ್ವ ಅಧಿಕಾರಿಯ ನೌಕರಿಯನ್ನು ಉಳಿಸಲು ಇಡೀ ಇಲಾಖೆ ಪ್ರಯತ್ನಿಸುತ್ತಲಿದೆಯಾದರೂ, ಅಂದು ಬೇಗನೆ ಬಂದಿದ್ದ ಪತ್ರಿಕೆ ಮತ್ತು ಟಿ.ವಿ ಮಾಧ್ಯಮದವರು ಸತ್ಯ ಸಂಗತಿಯನ್ನು ದಾಖಲಿಸಿಬಿಟ್ಟರು.

ಪೂರ್ವ ಯೋಜಿತ ಕೃತ್ಯ

ಜನರು ಶಾಂತಿ ಭಂಗ ಮಾಡಿದರೂ ಅವರನ್ನು ಸಂತೈಸಬೇಕಾದ ಹೊಣೆಗಾರಿಕೆ ಖಾಕಿಧಾರಿಗಳದ್ದು. ಬಸವ ಕಲ್ಯಾಣ ನೆಲದ ಗುಣ ಬೇರೆಯೇ ಇದೆಯೇನೊ! ಮೊದಲ ಕಲ್ಯಾಣ ಪರ್ವದಲ್ಲಿ ಮುದುಕರು, ಮಕ್ಕಳು ಎಂದು ನೋಡದೆ ಶಾಂತವಾಗಿದ್ದ ಜನರನ್ನು ಥಳಿಸಿದರು. ಈ ಸಲ ಯಾವ ಪ್ರಚೋದನೆಯೂ ಇಲ್ಲದೆ ಸಿದ್ಧರಾಮೇಶ್ವರ ಸ್ವಾಮಿಗಳನ್ನು ಥಳಿಸಿದರು. ಗೋಪಾಲ್ ರಾಠೋಡ ಮತ್ತು ಮೂವರು ಸಹಚರರ ಕ್ರೂರ ವರ್ತನೆ ಬಿಟ್ಟರೆ ಬಾಕಿ ಅಧಿಕಾರಿಗಳ ಸಹಕಾರ, ವರ್ತನೆ ಸೌಜನ್ಯದಿಂದ ಕೂಡಿದ್ದವು. ಹೀಗಾಗಿ ಅನುಮಾನದ ಬೆರಳು ಗೋಪಾಲ ರಾಠೋಡ್ ಹತ್ತಿರವೇ ಸಾಗುತ್ತದೆ. ತಕ್ಷಣ ಏನು ನಡೆಯಿತೆಂಬುದು ನಮಗೆ ಗೊತ್ತಾಗಲಿಲ್ಲವಾದರೂ ಗೋಪಾಲ ರಾಠೋಡ್ ಸ್ವಾಮಿಗಳನ್ನು ಗಾಡಿಯಿಂದ ಕೆಳಗಿಳಿಯಲು ಹೇಳಿ ಆಗ ಮೂವರು (ಸ್ಕಾರ್ಫ್ ಹೊದ್ದಿದ್ದ) ಕೇಡಿಗಳು ''ಇವರೇ ನೋಡ್ರಿ'' ಎಂದು ಸ್ವಾಮಿಗಳತ್ತ ಕೈ ತೋರಿಸಿದ್ದನ್ನು ಶರಣರು ಗಮನಿಸಿದ್ದಾರೆ. ಆತ ಮತ್ತು ಮೂವರು ಪೋಲೀಸ್ ಪೇದೆಗಳು ಸ್ವಾಮಿಗಳನ್ನು ಹೊಡೆದರು, ಜನರು ಗುಂಪುಗೂಡಿ ರಾಠೋಡರನ್ನು ಬೆನ್ನು ಹತ್ತುತ್ತಲೇ ಅವರನ್ನು ಸಂದಿಯಲ್ಲಿ ನುಗ್ಗಿಸಿ ಮನೆಯಲ್ಲಿ ಮುಚ್ಚಿಟ್ಟವರೂ ಅದೇ ಮೂವರು ಸ್ಕಾರ್ಫ್ ಹೊದ್ದುಕೊಂಡ ವಂಚಕರು. ಇದರಿಂದ ಈ ಹಲ್ಲೆ ಪೂರ್ವ ಯೋಜಿತ ಕೃತ್ಯ ಎಂದೇ ಬಹಳ ಜನ ಮಾತನಾಡಲಾರಂಭಿಸಿದರು.

ಸುಳ್ಳು ಕೇಸು ದಾಖಲೆ

ಪೂಜ್ಯ ಸ್ವಾಮಿಗಳನ್ನು ಹೊಡೆಯುತ್ತಲೇ ಅನೇಕ ಶರಣರು ಆಗ್ರಹಿಸಿ ಒಂದು ಕೇಸನ್ನು ದಾಖಲು ಮಾಡಿದರು. ಆದರೆ ಪೋಲೀಸ್ ಇಲಾಖೆಯು ಹೊಡೆದ ಪೇದೆಯೊಬ್ಬನ ಕೈಯಿಂದ, ರಾಠೋಡರನ್ನು ಸಂರಕ್ಷಿಸಲು ಸ್ವಾಮಿಗಳ ವಿರುದ್ಧ ಒಂದು ಸುಳ್ಳು ಕೇಸನ್ನು ಹಾಕಿಸಿ ''ಸ್ವಾಮಿಗಳು ಗಾಡಿಯನ್ನು ಹತ್ತಿಸಿ ಪೋಲೀಸ್ ಅಧಿಕಾರಿಯ ಹತ್ಯೆಗೆ ಯತ್ನಿಸಿದರು. ಅದಕ್ಕೇ ಆತ ಹೊಡೆದುದು.''

ಎಂದು ಆರೋಪಿಸಿದ್ದಾರೆ. ಸ್ವಾಮಿಗಳು ಕೆಳಗಿಳಿದು ನಿಂತಿದ್ದರು. ಶಾಂತ ವಾತಾವರಣದಲ್ಲಿ ನಡೆಯುತ್ತಿದ್ದ ಮೆರವಣಿಗೆಯಲ್ಲಿ ಗಲಭೆಗೆ ಪ್ರಚೋದನೆ ಮಾಡುವಂತೆ ಪೋಲೀಸ್ ಅಧಿಕಾರಿ ವರ್ತಿಸಿದುದು ಅಪರಾಧವಲ್ಲವೆ? ಆದರೆ ಪೋಲೀಸ್ ಇಲಾಖೆಗೆ ಅನ್ಯಾಯದ ವಿರುದ್ಧ ನ್ಯಾಯ ನೀಡುವುದು ಬೇಕಾಗಿಲ್ಲ, ತನ್ನ ಇಲಾಖೆಯ ಅಧಿಕಾರಿಯ ದುರ್ವರ್ತನೆಯನ್ನು ಮುಚ್ಚಿ ಹಾಕುವುದು ಬೇಕಾಗಿದೆ. ಈ ಹಲ್ಲೆಯ ಘಟನೆ ನಡೆದಾಗ ಸ್ವಾಮೀಜಿಯವರ ಜೊತೆ ಅನೇಕ ಜನರು ಇದ್ದರಲ್ಲದೆ ಮೆರವಣಿಗೆಯನ್ನು ದಾಟಿ ಮುಂದೆ ಬಂದ ಶರಣರೂ ಇದ್ದರು.

ಬಗೆಬಗೆಯ ವದಂತಿಗಳು

ಬಸವಾದಿ ಪ್ರಮಥರ ಕ್ಷೇತ್ರಗಳು ಬೆಳವಣಿಗೆ ಹೊಂದದೆ ಉಳಿದುದು ದುರ್ದೈವದ ಸಂಗತಿ. ಕೂಡಲ ಸಂಗಮ, ಬಾಗೇವಾಡಿ, ಉಳವಿ, ಬಸವ ಕಲ್ಯಾಣ ಹೀಗೆ ಎಲ್ಲವೂ ಹಿಂದುಳಿದಿದ್ದವು. ದೇವಸ್ಥಾನಗಳ ಆದಾಯವನ್ನು ಸ್ವಂತ ಆಸ್ತಿಯಂತೆ ದುರ್ಬಳಕೆ ಮಾಡಿಕೊಳ್ಳುತ್ತ ಹೋದರೆ ಅವು ಹೇಗೆ ಅಭಿವೃದ್ಧಿ ಹೊಂದುತ್ತವೆ? ಹೊರಗಿನ ಜನ ಯಾರೂ ಬರಬಾರದೆಂದು ಕೆಲವೇ ಕೆಲವರು ಹಿಡಿತ ಸಾಧಿಸಿ ಆಡಳಿತ ನಡೆಸುತ್ತಿದ್ದರು. ಕೂಡಲ ಸಂಗಮಕ್ಕೆ ನಾವು ಹೋದಾಗ ಗುಡಿಯ ಪೂಜಾರಿ ವರ್ಗ ವಿರೋಧಿಸಿದರೂ ಗ್ರಾಮದ ಜನರು ಆರಂಭದಿಂದಲೂ ಸಹಕರಿಸಿದರು. ಅಭಿವೃದ್ಧಿ ಪ್ರಾಧಿಕಾರ ಆದ ಮೇಲೆ ಒಳ್ಳೆಯ ಬದಲಾವಣೆ ಕಾಣುತ್ತಿದೆ. ಅದರಂತೆ ಬಸವ ಕಲ್ಯಾಣವು ಅಭಿವೃದ್ಧಿಯಾಗಬೇಕು. ಪ್ರಾಧಿಕಾರ ಆಗಿದೆ. ಬಸವೇಶ್ವರ ದೇವಾಲಯದ ಆಡಳಿತ ಮಂಡಳಿಯನ್ನು ರದ್ದು ಮಾಡಿ ಪ್ರಾಧಿಕಾರವು ಆಡಳಿತಾಧಿಕಾರಿಯನ್ನು ನೇಮಿಸಿದೆ. ಪ್ರತಿ ಸಲ ಸಂದರ್ಶನಕ್ಕೆ ಹೋದವರ ಮೇಲೆ ಹಲ್ಲೆ ಮಾಡಿ, ಜಗಳವಾಡಿ ಕಳಿಸಲು ಆಡಳಿತ ಮಂಡಳಿಯವರು ಜನರನ್ನು ನಿಯೋಜಿಸಿರುತ್ತಿದ್ದರು. ಈ ಸಲ ಅವರ ಹಿಡಿತ ತಪ್ಪಿದ್ದರಿಂದ ಎಲ್ಲಾ ಕಡೆ ಓಡಾಡಿ ಶರಣ ಬಂಧುಗಳು ಐತಿಹಾಸಿಕ ಸ್ಥಳಗಳನ್ನು ಸಂತೋಷದಿಂದ ಸಂದರ್ಶಿಸಿ ಬಂದರು.

ಹೀಗಾಗಿ ಹಳೆಯ ದೇವಸ್ಥಾನ ಮಂಡಳಿಯು ಹಲ್ಲು ಕಿತ್ತ ಹಾವಾಗಿದ್ದರೂ ಅರೆಪೆಟ್ಟು ತಿಂದ ಹುಲಿಯಂತೆ ತನ್ನ ಕೈಲಿ ಮಾಡಲಿಕ್ಕಾಗದ ಹಲ್ಲೆಯನ್ನು ಖಾಕಿಧಾರಿಗಳ ಮೂಲಕ ಮಾಡಿಸಿದೆ ಎಂದು ಒಂದು ವದಂತಿ. ಸರ್ಕಾರಕ್ಕೆ ಲೆಕ್ಕಪತ್ರ ವಹಿಸಿಕೊಡುವ ಮುನ್ನ ಬಹು ದೊಡ್ಡ ಮೊತ್ತವನ್ನು ಖಾತೆಯಿಂದ ಡ್ರಾ ಮಾಡಿ ಆಡಳಿತ ಮಂಡಳಿ ಸದಸ್ಯರು ಹಂಚಿಕೊಂಡಿದ್ದಾರೆ. ಮತ್ತು ಅವರೇ ಆತನಿಗೆ ಲಂಚ ಕೊಟ್ಟು ಹೊಡೆಸಿದ್ದಾರೆ ಎಂದು ಇನ್ನೊಂದು ಸುದ್ದಿ. ಈ ಹಲ್ಲೆಯ ಹಿಂದೆ ರಾಜಕೀಯ ಮುಖಂಡರ ಪ್ರಭಾವವೂ ಇದೆ ಎಂದು ಮತ್ತೊಂದು ವದಂತಿ. ಒಟ್ಟಾರೆ ಇವರೆಲ್ಲ ಸೇರಿ ಬಸವ ಕಲ್ಯಾಣದ ಕೀರ್ತಿಗೆ ಭಂಗ ತರುವವರೇ ಆಗಿದ್ದಾರೆಂದರೆ ಉತ್ಪ್ರೇಕ್ಷೆಯಲ್ಲ.

ವದಂತಿಗಳು ರೆಕ್ಕೆಪುಕ್ಕ ಪಡೆದು ಹಾರಾಡುತ್ತವೆ. ನಿಷ್ಪಕ್ಷಪಾತವಾದ ತನಿಖೆಯಿಂದ ಮಾತ್ರ ಸತ್ಯವು ಹೊರಬೀಳುತ್ತದೆ. ಅಂಥ ಪ್ರಾಮಾಣಿಕತೆಯನ್ನು ನಾವು ಈ ವ್ಯವಸ್ಥೆಯಲ್ಲಿ ನಿರೀಕ್ಷಿಸಬಹುದೆ? ನಿಸ್ಸಹಾಯಕರಾಗಿ ನೋವನ್ನು ಅನುಭವಿಸುತ್ತ ಸಹಿಸುತ್ತಾ ಹೋಗಬೇಕೋ ಅನ್ಯಾಯ, ದೌರ್ಜನ್ಯವನ್ನು ಪ್ರತಿಭಟಿಸುವ ಆತ್ಮಬಲ ಬೆಳೆಸಿಕೊಳ್ಳಬೇಕೋ ನೀವೇ ಹೇಳಿ!

ಪ್ರತಿಭಟನೆ

★ ಪೀಠಾಧಿಕಾರಿಯೊಬ್ಬರ ಮೇಲೆ ಪೋಲೀಸ್ ಅಧಿಕಾರಿಯು ಕಾರಣವಿಲ್ಲದೆ ಹಲ್ಲೆ ಮಾಡಿದ್ದರ ಬಗ್ಗೆ ತನಿಖೆಯಾಗಬೇಕು. ಆತ ಅಮಾನತ್ತುಗೊಳ್ಳಬೇಕು. ಪೂಜ್ಯ ಸ್ವಾಮೀಜಿಯವರ ವಿರುದ್ಧ ದಾಖಲಿಸಿರುವ ಸುಳ್ಳು ಕೇಸನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಆಗ್ರಹಿಸಿ ಬೀದರಿನ ರಾಷ್ಟ್ರೀಯ ಬಸವ ದಳ ಮತ್ತು ಲಿಂಗಾಯತ ಸಮಾಜದ ಮುಖಂಡರು ಬೀದರಿನ ಎಸ್.ಪಿ.ಯವರನ್ನು ಕಂಡು ಮನವಿ ಸಲ್ಲಿಸಿದ್ದಾರೆ.

★ ಬೈಲಹೊಂಗಲದ ಸಹಾಯಕ ಆಯುಕ್ತರ ಮೂಲಕ ಬೈಲಹೊಂಗಲ, ಸವದತ್ತಿ ಹಾಗೂ ಗೋಕಾಕದ ರಾಷ್ಟ್ರೀಯ ಬಸವ ದಳದ ಸದಸ್ಯರು ಬೈಲಹೊಂಗಲದಲ್ಲಿ ಪ್ರತಿಭಟನಾ ಮೆರವಣಿಗೆ ಮಾಡಿ ಮುಖ್ಯ ಮಂತ್ರಿಗಳ್ಳು ತಪ್ಪಿತಸ್ಥ ಅಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿ ಮನವಿ ಸಲ್ಲಿಸಿದ್ದಾರೆ.

ಅದ್ಭುತ ಯಶಸ್ಸಿನ 8ನೆಯ ಕಲ್ಯಾಣ ಪರ್ವ

-ಪೂಜ್ಯ ಚನ್ನಬಸವಾನಂದ ಸ್ವಾಮೀಜಿ

ಬಸವ ಕಲ್ಯಾಣ - ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿರುವ ಶರಣ ಭೂಮಿ ಬಸವ ಕಲ್ಯಾಣದಲ್ಲಿ ಪ್ರತಿವರ್ಷದಂತೆ ಈ ವರ್ಷವೂ 8ನೆಯ ಕಲ್ಯಾಣ ಪರ್ವ ಉತ್ಸವ ಅತ್ಯಂತ ಯಶಸ್ವಿಯಾಗಿ ಜರುಗಿತು. ಕರ್ನಾಟಕ ಮಾತ್ರವಲ್ಲದೆ ಮಹಾರಾಷ್ಟ್ರ, ಆಂಧ್ರ ಮತ್ತು ತಮಿಳುನಾಡು ರಾಜ್ಯಗಳಿಂದ 1 ಲಕ್ಷಕ್ಕೂ ಅಧಿಕ ಶರಣ ಶರಣೆಯರು ಎಲ್ಲೆಡೆ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದರೂ ಮೂರು ದಿನಗಳವರೆಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದನ್ನು ನೋಡಿದಾಗ 12ನೆಯ ಶತಮಾನದ ಅನುಭವ ಮಂಟಪದಲ್ಲಿಯೇ ತಾವಿದ್ದೇವೆ ಎಂಬಂತೆ ಅನುಭವವಾಯಿತು.

ಅ. 2ರಂದು ಬೆಳಿಗ್ಗೆ 10-30ಕ್ಕೆ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಜನ್ಮ ದಿನಾಚರಣೆಯೊಂದಿಗೆ ಆರಂಭವಾದ ಕಲ್ಯಾಣ ಪರ್ವದ ಉದ್ಘಾಟನಾ ಸಮಾರಂಭದಲ್ಲಿ ಮಳೆರಾಯನು ತುಂತುರು ಹನಿ ಉದುರಿಸುವ ಮೂಲಕ ಸ್ವಾಗತ ಕೋರಿದನು. ಉತ್ತರ ಕರ್ನಾಟಕದ ಹತ್ತು ಜಿಲ್ಲೆಗಳಲ್ಲಿ ಅತಿವೃಷ್ಟಿಯಾಗಿ ನೆರಹಾವಳಿಯಿಂದ ಜನರು ಅತೀವ ತೊಂದರೆಗೊಳಗಾದರೂ ಬೀದರ ಜಿಲ್ಲೆ ಅದರಲ್ಲೂ ವಿಶೇಷವಾಗಿ ಬಸವ ಕಲ್ಯಾಣದಲ್ಲಿ ಮಳೆಯಿಂದ ಯಾವುದೇ ರೀತಿಯ ಹಾನಿಯಾಗದೇ ಇರುವುದು ಅಥವಾ ಕಾರ್ಯಕ್ರಮಕ್ಕೆ ಅಡ್ಡಿಯಾಗದೇ ಇರುವುದು ವಿಶೇಷವಾಗಿತ್ತು.

ಕಲ್ಯಾಣ ಪರ್ವದ ಉದ್ಘಾಟನಾ ಸಮಾರಂಭ ಆರಂಭವಾಗುವ ಹೊತ್ತಿಗೆ ಆಗಸದಲ್ಲಿ ಮೋಡ ಕವಿದ ವಾತಾವರಣವಿತ್ತು. ಪೂಜ್ಯ ಮಾತಾಜಿಯವರು ಹಾಗು ಮುಖ್ಯ ಅತಿಥಿಗಳೆಲ್ಲ ವೇದಿಕೆಗೆ ಬರುವ ಸಮಯಕ್ಕೆ ಸರಿಯಾಗಿ ಮಳೆಹನಿ ಉದುರಲಾರಂಭಿಸಿತು. ಹೀಗೆ ಮಳೆ ಸುರಿಯ -ಲಾರಂಭಿಸಿದರೆ ಕಾರ್ಯಕ್ರಮ ಮಾಡುವುದು ಹೇಗೆ ಎಂಬ ಭಯ ಅನೇಕರಿಗೆ ಕಾಡುತ್ತಿತ್ತು. ಆದರೆ ಪೂಜ್ಯ ಶ್ರೀ ಮಹಾಜಗದ್ಗುರು ಮಾತಾಜಿಯವರು ಪ್ರಾರಂಭದಲ್ಲಿ ಸೃಷ್ಟಿಕರ್ತ ಲಿಂಗದೇವನನ್ನು ಸ್ಮರಿಸಿ ಧರ್ಮಪಿತ ಬಸವಣ್ಣನವರನ್ನು ಧ್ಯಾನಿಸಿಕೊಂಡು ಪ್ರಾರ್ಥನೆ ಮಾಡಲು ಆರಂಭಿಸಿದರು. ಅದಕ್ಕೂ ಮುನ್ನ ಪೂಜ್ಯ ಮಾತೆಯವರು "ನೆರೆ ಹಾವಳಿಗೆ ತುತ್ತಾಗಿ ಕಷ್ಟನಷ್ಟ ಅನುಭವಿಸುತ್ತಿರುವವರನ್ನು ದೇವರೇ ಕಾಪಾಡಬೇಕು. ಜನರಿಗೆ ಈ ರೀತಿಯ ಕಷ್ಟ ಕೊಡಬೇಡ ತಂದೆ" ಎಂದು ದೇವರಲ್ಲಿ ಮೊರೆಯಿಟ್ಟು ಸಂಕಲ್ಪ ಮಾಡಿಕೊಂಡು ಗದ್ಗದಿತರಾದರು. ಸಾಮೂಹಿಕ ಪ್ರಾರ್ಥನೆ ಆರಂಭವಾದ ಕೆಲವೇ ನಿಮಿಷದಲ್ಲಿ ಕಾರ್ಮೋಡ ಬಯಲಾಗಿ ಸೂರ್ಯನು ಉದಯಿಸಿ ಎಳೆ ಬಿಸಿಲು ಕಾಣಿಸಿಕೊಂಡಿತು. ಇದೊಂದು ಪವಾಡವೇ ಸರಿ.

ಉದ್ಘಾಟಕರಾಗಿ ಆಗಮಿಸಿದ್ದ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಬೀದರ್ ಕ್ಷೇತ್ರದ ಸಂಸತ್ ಸದಸ್ಯರಾದ ಶರಣ. ಎನ್. ಧರ್ಮಸಿಂಗ್ ಅವರು ಕಲ್ಯಾಣ ಜ್ಯೋತಿ ಬೆಳಗಿಸಿ ಕಲ್ಯಾಣ ಪರ್ವಕ್ಕೆ ಚಾಲನೆ ನೀಡಿ ಮಾತನಾಡುತ್ತ, "ಪೂಜ್ಯ ಮಾತಾಜಿ ಭೇಷ್ ಭೇಷ್" ಎಂದು ಕೊಂಡಾಡಿದರು. ಅನೇಕ ಜನ ಗಂಡಸರು, ಸ್ವಾಮಿಗಳು ಮಾಡದಿರುವ ಧರ್ಮಪ್ರಚಾರದ ಕಾರ್ಯವನ್ನು ಪೂಜ್ಯ ಮಾತೆಯವರು ಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ. ಕೆಲವು ಜನ ಅವರ ಕಾರ್ಯಗಳಿಗೆ ಅಡ್ಡಿ ಮಾಡುವವರು, ವಿರೋಧಿಸುವವರು ಇದ್ದಾರೆ. ಆದರೂ ಅದ್ಯಾವುದನ್ನು ಲೆಕ್ಕಿಸದೆ ಗುರು ಬಸವಣ್ಣನವರ ತತ್ವವನ್ನು ಜಗತ್ತಿನಾದ್ಯಂತ ಪ್ರಚಾರ ಮಾಡುತ್ತಿದ್ದಾರೆ. ಇದು ಅತ್ಯಂತ ಶ್ಲಾಘನೀಯ. ಸಮಾಜ ಸುಧಾರಣೆ ಮಾಡುವವರಿಗೆ ಯಾವತ್ತೂ ವಿರೋಧಗಳು ಇದ್ದೇ ಇರುತ್ತವೆ. ಮಾತಾಜಿಯವರ ಕಾರ್ಯಕ್ರಮಕ್ಕೆ ಹೋಗಬೇಡಿ ಎಂದು ಅನೇಕರು ನನಗೆ ಫೋನ್ ಮೂಲಕ ಹೇಳಿದರು. ಆದರೂ ಸಹ ನಾನು ಅವರ ಮಾತಿಗೆ ಕಿವಿಗೊಡಲಿಲ್ಲ ಎಂದ ಧರ್ಮಸಿಂಗ್ ಅವರು, ಒಳ್ಳೆಯ ಕೆಲಸ ಯಾರೇ ಮಾಡಲಿ ತಮ್ಮ ಸಹಕಾರ, ಬೆಂಬಲ ಸದಾ ಇರುತ್ತದೆ ಎಂದರು.

ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿರುವ ಬಸವ ಕಲ್ಯಾಣದಲ್ಲಿ ಅಂತರಾಷ್ಟ್ರೀಯ ಬಸವ ಸಂಶೋಧನಾ ಕೇಂದ್ರ ಸ್ಥಾಪಿಸಲು ಪ್ರಯತ್ನಿಸುವುದಾಗಿಯೂ ಧರ್ಮಸಿಂಗ್ ಭರವಸೆ ನೀಡಿದರು.

ಕಲ್ಯಾಣ ಪರ್ವದ ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯ ಮಾತಾಜಿಯವರು ಪ್ರಾಸ್ತಾವಿಕವಾಗಿ ಮಾತನಾಡಿ 12ನೆಯ ಶತಮಾನದಲ್ಲಿ ಎಲ್ಲಾ ಹಾದಿಗಳು ಕಲ್ಯಾಣಕ್ಕೆ ಬಂದು ಸೇರಿದ್ದವು. ಕಲ್ಯಾಣದ ಆ ವೈಭವ ಮತ್ತೆ ಮರು ಸ್ಥಾಪನೆಯಾಗಬೇಕಿದೆ. ಮತ್ತೊಮ್ಮೆ ಎಲ್ಲಾ ಮಾರ್ಗಗಳು ಕಲ್ಯಾಣ ಸೇರಬೇಕಿದೆ. ಈ ಮಹದುದ್ದೇಶದಿಂದಲೇ ಕಲ್ಯಾಣ ಪರ್ವ ನಡೆಸಲಾಗುತ್ತಿದೆ ಎಂದು ವಿವರಿಸಿದರು.

ಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿರುವ ಈ ಶರಣ ಭೂಮಿ ಅಂತಾರಾಷ್ಟ್ರೀಯ ಪ್ರವಾಸಿ ತಾಣವಾಗಬೇಕು. ಇಡೀ ವಿಶ್ವವೇ ಕಲ್ಯಾಣದತ್ತ ನೋಡಬೇಕು. 770 ಅಮರಾತ್ಮರನ್ನು ಹೊಂದಿದ ವಿಶ್ವದ ಏಕೈಕ ಪವಿತ್ರ ಕ್ಷೇತ್ರ ಇದಾಗಿದ್ದು ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ನೀಡಿದ ವಚನ ಸಾಹಿತ್ಯವು ಮನುಕುಲಕ್ಕೆ ದಾರಿದೀಪವಾಗಿದೆ. ಬಸವ ಕಲ್ಯಾಣದ ಸಮಗ್ರ ಅಭಿವೃದ್ಧಿಯ ನಿಟ್ಟಿನಲ್ಲಿ ತಮ್ಮ ಪ್ರಯತ್ನ ನಿರಂತರ ನಡೆಯಲಿದೆ ಎಂದು ಘೋಷಿಸಿದ ಪೂಜ್ಯ ಮಾತೆಯವರು ಶರಣ ಮೇಳದ ಮೂಲಕ ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮದ ಅಭಿವೃದ್ಧಿಗೆ ನಾಂದಿ ಹಾಡಲಾಗಿದ್ದು, ಕಲ್ಯಾಣ ಪರ್ವದ ಮುಖಾಂತರ ಬಸವ ಕಲ್ಯಾಣದ ಪ್ರಗತಿಗಾಗಿ ಹೊಸ ಹೆಜ್ಜೆ ಇಡಲಾಗಿದೆ. ಬಸವ ಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಮೂಲಕ ಸರ್ಕಾರವು ಅಭಿವೃದ್ಧಿ ಕೆಲಸ ನಡೆಸುತ್ತಿದ್ದರೆ, ಬಸವ ಮಹಾಮನೆ ಆವರಣದಲ್ಲಿ ಬಸವ ಧರ್ಮ ಪೀಠದ ವತಿಯಿಂದ ತಾವು ಹಲವು ಮಹತ್ವದ ಯೋಜನೆ ರೂಪಿಸಿರುವುದಾಗಿ ನುಡಿದರು.

108 ಅಡಿ ಎತ್ತರದ ಗುರು ಬಸವ ಪುತ್ಥಳಿ ಕೆಲಸ ಅರ್ಧದಷ್ಟು ಮುಗಿದಿದೆ. ಶರಣ-ಶರಣೆಯರ ಗವಿ ಸಿದ್ಧವಾಗಿವೆ. ಶರಣ ಗ್ರಾಮ ಯೋಜನೆಯೂ ಪ್ರಗತಿಯಲ್ಲಿದೆ. ಬಸವ ಮಹಾಮನೆಯ ಆವರಣವು ಕಲ್ಯಾಣದ ಅಂದಿನ ವೈಭವವನ್ನು ಬಿಂಬಿಸಲಿದೆ. ಬರುವ ದಿನಗಳಲ್ಲಿ ಬಸವ ಕಲ್ಯಾಣ ಅಂತರ್‌ರಾಷ್ಟ್ರೀಯ ಕೇಂದ್ರವಾಗುವುದು ಎಂದು ಪೂಜ್ಯ ಮಾತಾಜಿ ಆಶಾಭಾವ ವ್ಯಕ್ತಪಡಿಸಿದರು.

ಗುರು ಬಸವ ಜಯಂತಿಗೆ ಕೇಂದ್ರ ಸರ್ಕಾರದಿಂದ ರಜೆ ಘೋಷಿಸಲು ಹಾಗೂ ಬಸವ ಕಲ್ಯಾಣಕ್ಕೆ ರೈಲ್ವೆ ಮಾರ್ಗ ನಿರ್ಮಿಸಲು ಪ್ರಯತ್ನಿಸಬೇಕೆಂದು ಸಂಸದ ಧರ್ಮಸಿಂಗ್ ಅವರನ್ನು ಪೂಜ್ಯ ಮಾತಾಜಿ ಆಗ್ರಹಿಸಿದರು.

ಬಸವ ಧ್ವಜಾರೋಹಣ ಮಾಡಿದ ಆಂಧ್ರಪ್ರದೇಶದ ಜಹಿರಾಬಾದ್ ಕ್ಷೇತ್ರದ ಸಂಸತ್ ಸದಸ್ಯ ಸುರೇಶ್ ಶೆಟಕಾರರವರು ಮಾತನಾಡಿ ಪೂಜ್ಯ ಮಾತಾಜಿಯವರ ಬೇಡಿಕೆ ಈಡೇರಿಸಲು ತಾವು ಮತ್ತು ಹಿರಿಯರಾದ ಧರ್ಮಸಿಂಗ್ ಅವರು ಸೇರಿ ಪ್ರಯತ್ನಿಸುವುದಾಗಿ ಭರವಸೆ ನೀಡಿದರು. ಬೀದರ ಜಿಲ್ಲಾ ಪಂಚಾಯತ್ ಅಧ್ಯಕ್ಷ ನಸೀಮುದ್ದೀನ್ ಪಟೇಲ್, ಜಿಲ್ಲಾ ಪಂಚಾಯತ್ ಸದಸ್ಯರಾದ ರಾಜಶೇಖರ ನಾಗಮೂರ್ತಿ ಮತ್ತು ಭಾಜಪ ಮುಖಂಡ ಭಗವಂತ ಖೂಬಾ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿ, ಪೂಜ್ಯ ಮಾತಾಜಿಯವರ ಕಾರ್ಯ ಸಾಧನೆಯನ್ನು ಮುಕ್ತಕಂಠದಿಂದ ಕೊಂಡಾಡಿದರಲ್ಲದೆ, ಬಸವ ತತ್ವ ಇಂದು ಇಡೀ ವಿಶ್ವಕ್ಕೆ ಬೇಕಾಗಿದೆ. ನಾವು ವಚನ ಸಾಹಿತ್ಯವನ್ನು ಸರಿಯಾಗಿ ಅರಿತುಕೊಂಡು ಪ್ರಚಾರ ಮಾಡಬೇಕಾಗಿದೆ ಎಂದು ಕರೆ ಕೊಟ್ಟರು. ಶ್ರೇಷ್ಠ ಗ್ರಂಥಪಾಲಕ ಎಂಬ ಪ್ರಶಸ್ತಿ ಪಡೆದ ಡಾ|| ರವಿ.ಬಿ.ಗದ್ದಗಿಮಠ, ಗ್ರಂಥ ಪಾಲಕರು, ಗುಲಬರ್ಗಾ ವಿವಿ ಅವರನ್ನು ಈ ಸಂದರ್ಭದಲ್ಲಿ ಸತ್ಕರಿಸಲಾಯಿತು.

ಧಾರವಾಡ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಮಹಿಳಾ ಜಗದ್ಗುರು ಪೂಜ್ಯ ಶ್ರೀ ಮಾತೆ ಗಂಗಾದೇವಿಯವರು, ಬಸವ ಧರ್ಮ ಪೀಠದ ಎಲ್ಲಾ ಪೂಜ್ಯರು ಮತ್ತು ದೊಡ್ಡ ಮರಳೆವಾಡಿಯ ಪೂಜ್ಯ ಶ್ರೀ ಮೃತ್ಯುಂಜಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಡಾ|| ರಾಜೇಂದ್ರ ಪಾಟೀಲ್ ನಿರ್ಣಾ ಅತಿಥಿಗಳಿಗೆ ಮಾಲಾರ್ಪಣೆ ಮಾಡಿದರು. ಶರಣೆ. ಚಂದ್ರಮ್ಮ ಸದಾನಂದ ಸ್ವಾಮಿಯವರು ಸಭಾ ನಿರ್ವಹಣೆ ಮಾಡಿದರು.

ಅಂದು ಸಂಜೆ 4 ಗಂಟೆಗೆ ರಾಷ್ಟ್ರೀಯ ಬಸವ ದಳದ ಅಧಿವೇಶನ ಹಾಗೂ ಲಿಂಗಾಯತವು ಸ್ವತಂತ್ರ ಧರ್ಮ, 2011ರ ಜನಗಣತಿ ಮತ್ತು ಸಂವಿಧಾನಾತ್ಮಕ ಮಾನ್ಯತೆ ಈ ಕುರಿತು ಚಿಂತನೆ ನಡೆಯಿತು. ಜ್ಯೋತಿ ಬೆಳಗಿಸಿ ಉದ್ಘಾಟನೆ ನೆರವೇರಿಸಿದ ನವ ದೆಹಲಿಯ ಬಸವ ಮಂಟಪದ ಪ್ರಧಾನ ಸಂಚಾಲಕರಾದ ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿಯವರು ಮಾತನಾಡಿ

ಲಿಂಗಾಯತವು ಸ್ವತಂತ್ರ ಧರ್ಮ. ಇದು ಜಾತಿಯಲ್ಲ, ಮತವಲ್ಲ, ಪಂಥವಲ್ಲ ಇದನ್ನು ಎಲ್ಲರೂ ಅರಿಯಬೇಕು. ಸ್ವತಂತ್ರ ಧರ್ಮದ ಸಂವಿಧಾನಾತ್ಮಕ ಮಾನ್ಯತೆಗಾಗಿ ಹೋರಾಡಲು ರಾಷ್ಟ್ರೀಯ ಬಸವ ದಳದ ನೇತೃತ್ವದಲ್ಲಿ ಸಮಾನ ಮನಸ್ಕ ಸಂಘಟನೆಗಳ ಒಕ್ಕೂಟವೊಂದನ್ನು ರಚಿಸಿ ರಾಷ್ಟ್ರ ಮಟ್ಟದಲ್ಲಿ ಹೋರಾಟ ಮಾಡುವ ಅಗತ್ಯವಿದೆ ಎಂದು ಕರೆಕೊಟ್ಟರು. ಮೊದಲಿಗೆ ಪ್ರಾಸ್ತಾವಿಕವಾಗಿ ಮಾತನಾಡಿದ ವಿಶ್ವ ಬಸವ ಧರ್ಮ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಶರಣ ಬಸವ ಕಮಾರ ಪಾಟೀಲ ನ್ಯಾಯವಾದಿಗಳು, ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮಾನ್ಯತೆ ಎಂದೋ ಪಡೆಯ ಬೇಕಾಗಿತ್ತು. ಈ ಸಮಾಜದ ಮುಖಂಡರ ಮತ್ತು ಧಾರ್ಮಿಕ ನೇತಾರರ ನಿಷ್ಕಾಳಜಿಯಿಂದಾಗಿ ಸಾಧ್ಯವಾಗಿಲ್ಲ. ಇನ್ನ ಮೇಲಾದರೂ ಯುವ ಶಕ್ತಿ ಜಾಗೃತವಾಗಬೇಕು. ಎಲ್ಲರೂ ಒಮ್ಮನಸ್ಸಿನಿಂದ ಹೋರಾಡಲು ಸಿದ್ಧರಾದಾಗ ಖಂಡಿತ ಗುರಿಮುಟ್ಟಲು ಸಾಧ್ಯವಿದೆ ಎಂದರಲ್ಲದೆ, ಪೂಜ್ಯ ಮಾತಾಜಿಯವರಂಥ ಸಮರ್ಥ ಗುರುಗಳ ನೇತೃತ್ವದಲ್ಲಿ ನಾವೆಲ್ಲರೂ ಒಂದಾಗಿ ಮಾನ್ಯತೆಗಾಗಿ ಹೋರಾಡಬೇಕಾಗಿದೆ. ಮುಂಬರುವ 2011ರ ಜನಗಣತಿಯಲ್ಲಿ ಧರ್ಮದ ಕಾಲಂನಲ್ಲಿ ಎಲ್ಲರೂ 'ಲಿಂಗಾಯತ' ಎಂದೇ ಬರೆಸಬೇಕೆಂದು ಕರೆಕೊಟ್ಟರು.

ರಾಷ್ಟ್ರೀಯ ಬಸವ ದಳದ ಪ್ರಮುಖರಾದ ಶರಣ. ವೀರಣ್ಣ ಲಿಂಗಾಯತ ಕೊಪ್ಪಳ, ಧನರಾಜ ಜೀರಗೆ ಹೈದರಾಬಾದ್, ಎಂ.ಎಂ.ಹಿರಲಿಂಗಣ್ಣನವರು ಸವದತ್ತಿ, ಗುರುನಾಥ ಬುಟ್ಟೆ ಬೀದರ್, ಶಿವರಾಜ ಪಾಟೀಲ್ ಅತಿವಾಳ, ಆರ್.ಜೆ.ಶೆಟಗಾರ ಗುಲಬರ್ಗಾ, ಡಾ|| ಮಹೇಶ್ ಬಿರಾದರ ಔರಾದ್, ಡಾ|| ವೈಜನಾಥ ಬುಟ್ಟೆ ಔರಾದ್, ಚಂದ್ರಕಾಂತ ಎಖ್ಖೆಳ್ಳಿ, ಗಣಪತರಾವ್ ದೇಶಮುಖ್ ರವರು ಅಭಿಪ್ರಾಯ ಮಂಡನೆ ಮಾಡಿದರು. ಬೀದರ್ ಜಿಲ್ಲಾ ಲಿಂಗಾಯತ ಸಮಾಜ ಅಧ್ಯಕ್ಷರಾದ ಕುಶಲ್‌ರಾವ್ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ಬಸವ ಕಲ್ಯಾಣ ತಾಲ್ಲೋಕು ರಾ.ಬ.ದಳದ ಅಧ್ಯಕ್ಷ ಬಸವರಾಜ ಪಾಟೀಲ್ ಶಿವಪುರ ಅವರು ಸ್ವಾಗತಿಸಿದರು. ಶೂನ್ಯ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರು ದಿವ್ಯ ಸಾನಿಧ್ಯವಹಿಸಿದ್ದರು. ಕು. ನಿಸರ್ಗ, ಕು.ಸ್ವಾತಿ, ಕು.ಚೈತ್ರ ಬೆಂಗಳೂರು ಅವರು ಭಕ್ತಿ ತುಂಬಿದ ಹೃದಯದಿಂದ ವಚನ ನೃತ್ಯ ಮಾಡಿ ಎಲ್ಲರ ಮನಸ್ಸಿಗೆ ಆಹ್ಲಾದ ನೀಡಿದರು.

ದಿ. 2ರಂದು ಸಂಜೆ 6 ಗಂಟೆಗೆ ಪೂಜ್ಯ ಮಾತಾಜಿಯವರ ದಿವ್ಯ ಸನ್ನಿಧಿಯಲ್ಲಿ ಧರ್ಮ ಚಿಂತನ ಗೋಷ್ಠಿ -2 ಜರುಗಿತು. ಪೂಜ್ಯ ಮಾತಾಜಿಯವರು ಈ ಸಂದರ್ಭದಲ್ಲಿ ಆಶೀರ್ವಚನ ನೀಡಿ ಇಂದಿನ ಕಂಪ್ಯೂಟರ್ ಯುಗದಲ್ಲಿ ಯುವಜನರು ಧರ್ಮ-ಆಧ್ಯಾತ್ಮದ ಕಡೆ ಆಕರ್ಷಿತರಾಗುತ್ತಿಲ್ಲ. ಧರ್ಮದ ಕಡೆಗೆ ಜನ ಬರದಿದ್ದಾಗ ಧರ್ಮವನ್ನೇ ಮನೆಬಾಗಿಲಿಗೆ ಒಯ್ಯುವ ಕಾರ್ಯವನ್ನು ನಾವು ಮಾಡಬೇಕಾಗಿದೆ ಎಂದರು.

ಹರ್ಡೇಕರ ಮಂಜಪ್ಪನವರ "ಬಸವ ಬೋಧಾಮೃತ" ಪುಸ್ತಕವನ್ನು ಬಿಡುಗಡೆ ಮಾಡಿ ಮಾತನಾಡಿದ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಹಣಕಾಸು ನಿಯಂತ್ರಣಾಧಿಕಾರಿ ಎಸ್. ದಿವಾಕರ್ ಅವರು, ಪೂಜ್ಯ ಮಾತಾಜಿಯವರಿಗೂ ಮುಂಚೆಯೇ ನಿರಾಕಾರ ದೇವನಿಗೆ 'ಲಿಂಗದೇವ' ಪದ ಬಳಕೆಯಾಗಿದ್ದು ಈ ಪುಸ್ತಕದ ವೈಶಿಷ್ಟ್ಯ ಎಂದರು.

ಬೀದರ ಜಿ.ಪಂ.ಉಪಾಧ್ಯಕ್ಷೆ ಶರಣೆ. ಮೀನಾಕ್ಷಿ ಸಂಗ್ರಾಮ ಸನ್ಮಾನ ಸ್ವೀಕರಿಸಿ ಮಾತನಾಡುತ್ತ ಯಾವುದೇ ಕ್ಷೇತ್ರದಲ್ಲಿಯಾಗಲಿ ಮಹಿಳೆ ಮುಂದುವರಿಯಬೇಕಾದರೆ ಸಾಕಷ್ಟು ಅಡ್ಡಿ-ಆತಂಕ ಬರುತ್ತವೆ. ರಾಜಕೀಯ ಕ್ಷೇತ್ರದಲ್ಲಿರುವ ನನಗೆ ವಿರೋಧಗಳು ಬರುವುದು ಸಹಜ. ಆದರೆ ಧಾರ್ಮಿಕ ರಂಗವನ್ನು ಬಿಟ್ಟಿಲ್ಲ ಎಂದರು. ಪೂಜ್ಯ ಮಾತಾಜಿಯವರಲ್ಲಿ ದೈವೀ ಶಕ್ತಿಯಿದೆ. ಎಲ್ಲ ತೊಂದರೆಗಳನ್ನು ಎದುರಿಸಿ ನಮ್ಮ ಸಮಾಜಕ್ಕೆ ಹೊಸ ಬೆಳಕನ್ನು ನೀಡುತ್ತಿದ್ದಾರೆ ಎಂದು ತುಂಬ ಮಾರ್ಮಿಕವಾಗಿ ನುಡಿದರು.

ಬಸವೇಶ್ವರ ಮೂರ್ತಿಗಳ ಶಿಲ್ಪಿಗಳಾದ ಶಿವರುದ್ರಪ್ಪ ಬಾಬಣೆ ಸಂತಪುರ, ದಾನಿಗಳಾದ ಧೂಳಪ್ಪ ಭದ್ರಶೆಟ್ಟಿ ಗುಲಬರ್ಗಾ ಅವರನ್ನು ಸತ್ಕರಿಸಲಾಯಿತು. ಭೀಮಣ್ಣ ಬೋನಾಳ ಮೇದಾರ ಕೇತಯ್ಯ ಸಮಾಜದ ಮುಖಂಡರು, ಮಾಯಾದೇವಿ ಬಸವ ತೀರ್ಥಪ್ಪ ಸಿಂಧನಕೇರಾ ಅವರು

ವಿಶೇಷ ಆಹ್ವಾನಿತರಾಗಿದ್ದರು. ಹಿರಿಯ ನ್ಯಾಯವಾದಿ ಗಂಗಶೆಟ್ಟಿ ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು.

ದಿ. 3ರಂದು ಬೆಳಿಗ್ಗೆ 10-30ಕ್ಕೆ ಶರಣ ವಂದನೆ -ಶರಣರಿಗೆ ಶರಣಾರ್ಥಿ ಹೃದಯ ಸ್ಪರ್ಶಿ ಕಾರ್ಯಕ್ರಮ ಜರುಗಿತು. ಸಹಸ್ರಾರು ಶರಣರು ಸೇರಿ 12ನೆಯ ಶತಮಾನದ ಆದಿ ಶರಣರ ಹೆಸರುಗಳನ್ನು ಹೇಳಿ ಶರಣು -ಶರಣಾರ್ಥಿ ಹೇಳುವುದು ಕಲ್ಯಾಣ ಪರ್ವದ ವಿಶೇಷ ಕಾರ್ಯಕ್ರಮ.

ಬಸವ ಧರ್ಮ ಪೀಠದ ಷಡ್‌ಗಣಾಧೀಶರು ಶರಣರ ಹೆಸರುಗಳನ್ನು ಹೇಳಿ ಸದ್ಭಕ್ತರಿಂದ ಶರಣಾರ್ಥಿ ಹೇಳಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿ ಮೂರು ದಿವಸದ ಕಾರ್ಯಕ್ರಮದಲ್ಲಿ ಭಾಗವಹಿಸಿದ ತಮಿಳುನಾಡಿನ ಕೊಯಿಮತ್ತೂರಿನ ಸಿ.ಆರ್.ಆರುಮುಗಮ್ ಅವರು ಶರಣ ವಂದನೆಯ ನಂತರ ತಮ್ಮ ಅನುಭವವನ್ನು ಹೇಳಿದರು. ಬೇರೆ ಮಠಾಧೀಶರಿಗೆ ಹಣ ಬಹಳ ಮುಖ್ಯವಾಗಿದೆ ಆದರೆ ಪೂಜ್ಯ ಮಾತಾಜಿಯವರು ಭಕ್ತಿಯ ತಳಹದಿಯಮೇಲೆ ಸಮಾಜ ಕಟ್ಟುತ್ತಿದ್ದಾರೆ ಎಂದು ಅರ್ಧ ತಮಿಳು ಅರ್ಧ ಕನ್ನಡದಲ್ಲಿ ಹೇಳಿ ಎಲ್ಲರ ಮನ ಮುಟ್ಟುವಂತೆ ಮಾತನಾಡಿದರು.

ಉದಗೀರನ ರಾಜಕೀಯ ಧುರೀಣರಾದ ಶರಣೆ. ಉತ್ತರಾಬಾಯಿ ಕಲಬುರ್ಗೆ, ಬೀದರಿನ ಚಂದ್ರಮ್ಮ ಪಾಟೀಲ ಗಾದಗಿ, ಮೆಹಬೂಬ್ ನಗರದ ಕೊಂಡಾ ಬಸವರಾಜ್, ವಿಶ್ವಲಿಂಗಾಯತ ಪರಿಷತ್‌ನ ಇತರ ಮುಖಂಡರು, ಆಂಧ್ರಪ್ರದೇಶದ ಕರಚಲ್‌ನ ಪೂಜ್ಯ ಚನ್ನಮಲ್ಲಿಕಾರ್ಜುನ ಮಹಾ ಸ್ವಾಮೀಜಿ ಉಪಸ್ಥಿತರಿದ್ದರು. ಬೆಳಗಾವಿ ರಾ.ಬ.ದಳ ಅಧ್ಯಕ್ಷ ಶರಣ. ಕೆ. ಬಸವರಾಜ ಅಧ್ಯಕ್ಷತೆ ವಹಿಸಿದ್ದರು. ಆರು ಜನ ಪೂಜ್ಯರು ಕಲ್ಯಾಣ ಜ್ಯೋತಿ ಬೆಳಗಿಸಿ ಉದ್ಘಾಟನೆ ಮಾಡಿದರು. ಪೂಜ್ಯ ಬಸವ ಪ್ರಭು ಸ್ವಾಮೀಜಿ ಧರ್ಮಧ್ವಜಾರೋಹಣ ಮಾಡಿದರು. ಪೂಜ್ಯ ಮಾತೆಯರಾದ ಮಾತೆ ಜ್ಞಾನೇಶ್ವರಿ, ಮಾತೆ ನಿಶ್ಚಲಾಂಬ, ಮಾತೆ ಸತ್ಯಾದೇವಿಯವರು ಗುರು ಪೂಜೆ ಸಲ್ಲಿಸಿದರು. ಶರಣ. ಬಸವರಾಜ ಸಂಗಮದ ಸ್ವಾಗತಿಸಿದರು. ಸಂಜೆ ನಡೆದ ಧರ್ಮ ಚಿಂತನ ಗೋಷ್ಠಿಯನ್ನು ಶರಣರಾದ ಅವರಾದಿನ ಶಾಸಕರಾದ ಪ್ರಭು ಚವ್ಹಾಣ ಉದ್ಘಾಟಿಸಿದರು.

ದಿ. 4ರಂದು ಬೆಳಿಗ್ಗೆ ಪ್ರತಿ ವರ್ಷದಂತೆ ಕೋಟೆಯಿಂದ ಬಸವ ಮಹಾಮನೆವರೆಗೆ ಪಥ ಸಂಚಲನ ಜರುಗಿತು. ಮೆರವಣಿಗೆಯಲ್ಲಿ ಎಲ್ಲರೂ ಭಕ್ತಿ ಭಾವ ತುಂಬಿ ವಚನ ಭಜನೆ ಮಾಡುತ್ತ ಸಾಗಿದರು. ಪರುಷ ಕಟ್ಟೆಯಿಂದ ಜ್ಯೋತಿಯನ್ನು ಹೊತ್ತಿಸಿಕೊಂಡು ಬಂದು ಅದೇ ಜ್ಯೋತಿಯಿಂದ ಶೂನ್ಯ ಪೀಠಾರೋಹಣ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮೀಜಿಯವರು ಪೀಠಾರೋಹಣ ಮಾಡಿ ಸಂದೇಶ ನೀಡಿದರು. 2,3 ಮತ್ತು 4ರಂದು ಅತ್ಯಂತ ಯಶಸ್ವಿಯಾಗಿ ಜರುಗಿದ ಕಾರ್ಯಕ್ರಮವನ್ನು ನೋಡಿ ಸಹಿಸಲಾಗದ ಕೊಂಡೆ ಮಂಚಣ್ಣಗಳ ಸಂತತಿಯವರು ಪಿ.ಎಸ್.ಐ ರಾಠೋಡ್ ಮೂಲಕ ಪೂಜ್ಯ ಸ್ವಾಮೀಜಿಯವರ ಮೇಲೆ ಹಲ್ಲೆ ಮಾಡಿಸಿದರು. ಹಣೆಗೆ ಗಾಯವಾಗಿ ರಕ್ತ ಸುರಿಯುತ್ತಿದ್ದರೂ ಪೂಜ್ಯ ಸ್ವಾಮೀಜಿಯವರು ಯಥಾವತ್ತಾಗಿ ಪೀಠಾರೋಹಣ ಮಾಡಿ ನಿರರ್ಗಳವಾಗಿ ಒಂದು ಗಂಟೆಯ ಕಾಲ ಪೀಠಾರೋಹಣ ಸಂದೇಶ ನೀಡಿದರು. ಕೊಲುವೆನೆಂಬ ಭಾಷೆ ದೇವನದಾದರೆ ಗೆಲುವೆನೆಂಬ ಭಾಷೆ ಭಕ್ತನದು ಎಂಬಂತೆ ಶರಣರು ನೊಂದು ಸೈರಿಸಿದರು. ಉದಾರ ಹೃದಯದ ಶರಣರು ಪೋಲೀಸರನ್ನು ಮತ್ತು ಕೊಂಡೆ ಮಂಚಣ್ಣ ಸಂತತಿಯನ್ನು ಕ್ಷಮಿಸಿದರೂ ಲಿಂಗದೇವನು ಮಾತ್ರ ಖಂಡಿತ ಅವರನ್ನು ಕ್ಷಮಿಸುವುದಿಲ್ಲ. ಲಿಂಗದೇವನ ಕೃಪೆಯಿಂದ ಕಲ್ಯಾಣ ಪರ್ವ ಅತ್ಯಂತ ಯಶಸ್ವಿಯಾಗಿ ಜರುತ್ತಲ್ಲದೆ ಸುವರ್ಣಾಕ್ಷರದಲ್ಲಿ ಬರೆದಿಡುವಂತಾಯಿತು.

★ ಕಲ್ಯಾಣ ಪರ್ವ ಕಾರ್ಯಕ್ರಮ, ಅದರ ನಂತರ ಚಿತ್ರದುರ್ಗ, ಶಿವಮೊಗ್ಗ, ಭದ್ರಾವತಿಗಳಲ್ಲಿ ಕಾರ್ಯಕ್ರಮಗಳಿಗೆ ಭಾಗಿಯಾದ್ದರಿಂದ ಪತ್ರಿಕೆಯನ್ನು ಮುದ್ರಿಸಲು ಸಮಯ ಸಾಕಾಗದೆ 20 ಪುಟಗಳಿಗೆ ಸೀಮಿತಗೊಳಿಸಬೇಕಾದುದಕ್ಕೆ ವಿಷಾದಿಸುತ್ತೇವೆ.

– ಮಾತಾಜಿ

ಬಸವ ವಚನಾಮೃತ

296. ಅನಾಥ ಪ್ರಜ್ಞೆ

ಉಡುವಿನ ಭಾವದಲ್ಲಿ ಹಡೆದರೆಮ್ಮವರು
ಊಸರವಳ್ಳಿಯಂತೆ ಎನ್ನ ಇರವು,
ಬಾವುಲ ಬಾಳುವೆಯ ತೆರನಂತೆ!
ಹೊತ್ತಾರೆ ಎದ್ದ ಕುರುಡಂಗೆ
ಅಗುಸೆಯಲ್ಲಿ ಅಸ್ತಮಾನವಾದಂತೆ -
ಆನು ಭಕ್ತಿಯ ಬಯಸಿದಡಹುದೆ ಲಿಂಗದೇವಾ? -ಬ.ವ.ದೀ.294

ಸಾಧಕಾವಸ್ಥೆಯಲ್ಲಿರುವ ಬಸವಣ್ಣನವರು ತಮ್ಮ ಬಗ್ಗೆಯೇ ತಾವು ಅವಲೋಕನ ಮಾಡಿಕೊಳ್ಳುತ್ತ ಪರಿತಪಿಸುವರು. ಸಾಧಕರ ಜೀವನದ ಆರಂಭದ ದಿನಗಳಲ್ಲಿ ಸಾಧನೆ ಎಡಹುತ್ತ, ಕುಂಟುತ್ತ ಸಾಗುವಾಗ ವಿಚಿತ್ರವಾದ ತೊಳಲಾಟ, ಅನಾಥ ಪ್ರಜ್ಞೆ ಕಾಡುತ್ತದೆ. ಯಾರ ಮುಂದಾದರೂ ಹೇಳಿಕೊಳ್ಳೋಣವೆಂದರೆ ಬಹು ಪಾಲು ಜನ ಬರೀ ಲೌಕಿಕ ಸುಖಭೋಗಗಳಲ್ಲಿ ಆಸಕ್ತರು. ಅವರಿಗೆ ಕೇಳಲು ಪುರಸೊತ್ತು ಇರದು, ಆಸಕ್ತಿಯೂ ಇರದು. ಅವರ ಕಣ್ಣಿಗೆ ಸಾಧಕರ ತೊಳಲಾಟ ಹುಚ್ಚಿನಂತೆ ತೋರುತ್ತದೆ. ಹೀಗಾಗಿ "ದೇವ ವಿರಹಿ"ಗಳು ಬಹಳಷ್ಟು ಸಂಕಟ ಅನುಭವಿಸುವರು.

ಉಡುವು ಮರಿಗಳನ್ನು ಹಾಕುತ್ತದೆ. ಆದರೆ ಇತರ ಪ್ರಾಣಿಗಳು ಉದಾಹರಣೆಗೆ ಆನೆ, ಕೋಳಿ, ಪಕ್ಷಿಗಳಂತೆ ಮರಿಗಳನ್ನು ಸಂರಕ್ಷಣೆ ಮಾಡುವುದಿಲ್ಲ. ತಾಯಿಯ ಗರ್ಭದಿಂದ ಹೊರಬರುತ್ತಲೇ ಉಡುವಿನ ಮರಿಗಳು ತಮ್ಮ ಪಾಡಿಗೆ ತಾವು ಹರಿದಾಡುತ್ತ ಆಹಾರ ಅರಸಿ ಚದುರುತ್ತವೆ. ಅದೇ ರೀತಿ ನನ್ನನ್ನು ಹೆತ್ತವರು ನನ್ನನ್ನು ಅರ್ಥಮಾಡಿಕೊಳ್ಳದೆ ಹೋದರು. ಹೀಗಾಗಿ ನಾನು ಅನಾಥ. ಊಸರವಳ್ಳಿ ಕ್ಷಣಕ್ಕೊಮ್ಮೆ ಪರಿಸರಕ್ಕೆ ತಕ್ಕಂತೆ ಬಣ್ಣ ಬದಲಿಸುವಂತೆ ನನ್ನ ಆಲೋಚನೆಗಳಲ್ಲಿ ಹೊಯ್ದಾಟ. ತೊಗಲ ಬಾವಲಿ ಜೀವನ ಪರ್ಯಂತರ ಕತ್ತಲಲ್ಲೇ ಇರುವಂತೆ ಮತ್ತು ತಲೆಕೆಳಗಾಗಿ ನೇತಾಡುತ್ತ ಜಗತ್ತನ್ನು ತಿರುಗಾಮುರುಗ ನೋಡುವಂತೆ ಮತ್ತು ಅಜ್ಞಾನದ ಅಂಧಕಾರದಲ್ಲಿ ಸಿಕ್ಕಿಕೊಂಡವನಾಗಿದ್ದೇನೆ. ಕುರುಡನಿಗೆ ಸಮಯದ ಬೆಲೆ ತಿಳಿಯದು. ಅವನಿಗೆ ಹಗಲೂ ಒಂದೇ ರಾತ್ರಿಯೂ ಒಂದೆ. ಯಾವಾಗಲೋ ಎದ್ದು ತಡಕಾಡುತ್ತ ಊರ ಹೆಬ್ಬಾಗಿಲಿಗೆ ಬರುವನು. ಕಣ್ಣು ಕಾಣದ್ದರಿಂದ ಹಗಲನ್ನೇ ರಾತ್ರಿ ಎಂದು ತಿಳಿಯುವನು. ಹೀಗೆ ನಾನೂ ಸಹ ಸಮಯವನ್ನು ಸಾರ್ಥಕ ಮಾಡಿಕೊಳ್ಳದೆ ವ್ಯರ್ಥವಾಗಿ ಜೀವನ ಕಳೆಯುವ ಮತಿಹೀನನಾಗಿದ್ದೇನೆ. ಆದ್ದರಿಂದ ಇಷ್ಟೆಲ್ಲ ದೋಷ, ದೌರ್ಬಲ್ಯ, ದುರ್ಗುಣ ಇರುವ ನನಗೆ ಭಕ್ತಿ ಅಳವಡುವುದಾದರೂ ಹೇಗೆ? ಲಿಂಗದೇವನ ಒಲುಮೆ ಸಿಗುವುದಾದರೂ ಹೇಗೆ ?

297. ಉದರ ಪೋಷಕ ಭಕ್ತರು

ಬಸುರ ಬಾಳುವೆಗೆ
ಮಸಿಯ ಹೂಸಿ ನೇರಿಲಹಣ್ಣ ಮಾರುವಂತೆ,
ಕಾಲ ಸಾಲ ದಾರಿದ್ರ್ಯಕ್ಕಂಜಿ ನಿಮ್ಮ ಮರೆಹೊಕ್ಕೆನಯ್ಯ
ಆವುದ ಹುಸಿಯೆಂಬೆ ? ಆವುದ ಕಿರಿದೆಂಬೆ ?
ಇದ ನೀನೆ ಬಲ್ಲೆಯಯ್ಯಾ,
ಲಿಂಗದೇವಾ, ನಾನು ಉದರಪೋಷಕನಯ್ಯಾ - ಬ.ವ.ದೀ.295

ನೇರಳೆ ಹಣ್ಣುಗಳನ್ನು ಕಿತ್ತು ಅಥವಾ ಆಯ್ದು, ಅದು ಇನ್ನೂ ಪಕ್ವವಾಗಿಲ್ಲದಿದ್ದಾಗಲೇ ಮಾರುವ ಅವಸರ ಬಡವ ಮಾರಾಟಗಾರನಿಗೆ. ಏನು ಮಾಡುವುದು ಹೊಟ್ಟೆಯ ಸಂಕಟ, ಹೀಗೆ ಮಾಡಿಸುತ್ತದೆ. ಅದಕ್ಕೆ ಅವನು ಮಸಿಯನ್ನು ಅವಕ್ಕೆ ಹಚ್ಚಿ ಪಕ್ವವಾದ ಹಣ್ಣಿನಂತೆ ಕಾಣುವಂತೆ ಮಾಡುವನು. ಅದೇ ರೀತಿ ಕೆಲವರು ಕಾಲ, ಸಾಲ, ದಾರಿದ್ರ್ಯಕ್ಕೆ ಅಂಜಿ ದೀಕ್ಷೆಪಡೆದು ಭಕ್ತರಾಗುವರು.

ಇದು ನಿಜವಾದ ಪರಿವರ್ತನೆಯಲ್ಲ. ಮಾನಸಾಂತರ ಹೊಂದಿ ತತ್ವಗಳನ್ನು ಮೆಚ್ಚಿ, ಲಿಂಗದೇವನಿಗೆ ಶರಣಾಗಿ, ಇಷ್ಟಲಿಂಗದ ಬಗ್ಗೆ ಅಭಿಮಾನ ಹೊಂದಿ, ಶರಣರ ಸಾಂಗತ್ಯದ ಮಹತ್ವ ಅರಿತು ಭಕ್ತರಾದರೆ ಅದು ನಿಜವಾದ ಪರಿವರ್ತನೆ. ಇಂಥ ಪರಿವರ್ತನೆ ಹೊಂದುವವರು ತುಂಬಾ ಕಡಿಮೆ.

ಕಾಲಕ್ಕೆ ಅಂಜಿ -ಅಂದರೆ ಸಾವಿಗೆ ಅಂಜಿ ಪೂಜೆ -ಭಕ್ತಿ ಮಾಡುವಿಕೆ. ಭಕ್ತಿಯು ಭಯದ ತಳಹದಿಯ ಮೇಲಿರಬಾರದು, ದೇವರನ್ನು ಅನನ್ಯವಾಗಿ ಪ್ರೀತಿಸಲು ಭಕ್ತಿಯನ್ನು ಮಾಡಬೇಕು; ಇದಕ್ಕೆ ಇನ್ನೊಂದು ಅರ್ಥ ಸಹ ಮಾಡಬಹುದು. ಕೆಲವರು ಗೆದ್ದೆತ್ತಿನ ಬಾಲ ಹಿಡಿಯುವ ಸಮಯ ಸಾಧಕರಾಗಿರುವರು. ಮೊದ ಮೊದಲು ಶರಣರಿಗೆ, ಬಸವ ಧರ್ಮಕ್ಕೆ ಕಿರುಕುಳಕೊಟ್ಟವರು ವಿರೋಧಿಸಿದವರು ಅದು ಬಲಶಾಲಿಯಾಗಿ ಬೆಳೆದಾಗ ತಾವೂ ದೀಕ್ಷೆ ಪಡೆಯುವರು. (ಉದಾಹರಣೆಗೆ ಬ್ರಾಹ್ಮಣ ಪುರೋಹಿತಶಾಹಿ ಲಿಂಗಾಯತ ಧರ್ಮವು ಹುಟ್ಟಿ, ಬೆಳೆಯುವಾಗ ಎಷ್ಟು ಕಿರುಕುಳ ಕೊಟ್ಟಿತೆಂಬುದು ಇತಿಹಾಸದಲ್ಲಿ ಸ್ಪಷ್ಟ. ಅದು ಪ್ರಬಲವಾಗಿ ಬೆಳೆದಾಗ ಪುನಃ ಅವರೇ ಇಷ್ಟಲಿಂಗ ದೀಕ್ಷೆ ಪಡೆದು ಒಳಗೆ ಪ್ರವೇಶಿಸಿದ್ದಲ್ಲದೆ ವೀರಶೈವದ ಕೊಳೆಯನ್ನು ತಂದು ಸೇರಿಸಿ, ಲಿಂಗಾಯತ ಧರ್ಮದ ಮೂಲ ಸ್ವರೂಪವನ್ನೇ ವಿಕೃತಗೊಳಿಸಿರುವರು).

ಸಾಲಕ್ಕಂಜಿ - ಗುರು ಬಸವಣ್ಣನವರು ಸಮೂಹ ಜೀವನದ ಒಂದು ನೂತನ ಪ್ರಯೋಗ ಮಾಡಿದ್ದಿರಬಹುದೆಂದು ನನ್ನ ಎಣಿಕೆ. ಉದಾಹರಣೆಗೆ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮರ ಪ್ರಸಂಗ. ನಾಳೆಗೆ ಎಂದು ಅಕ್ಕಿಯನ್ನು ತೆಗೆದಿಡದ ಶರಣ ದಂಪತಿಗಳು ಪ್ರಮಥರೆಲ್ಲರನ್ನು ಕರೆದು ಇಚ್ಛಾ ಭೋಜನದ ದಾಸೋಹ ಮಾಡಲು ಸಾಧ್ಯವಾದುದು ಹೇಗೆ ? ಇದರಿಂದ ನಾನು ಊಹಿಸುವುದು ಏನೆಂದರೆ, ಅಪ್ಪ ಬಸವಣ್ಣನವರು ಒಂದು ದಾಸೋಹ ನಿಧಿಯನ್ನು ಮಾಡಿರಬೇಕು. ಶರಣರೆಲ್ಲರೂ ತಾವು ದುಡಿದುದರಲ್ಲಿ ಒಂದು ಪಾಲನ್ನು, ತಮ್ಮ ನಿತ್ಯ ಜೀವನದ ಆವಶ್ಯಕತೆ ಪೂರೈಸಿಕೊಂಡು, ದಾಸೋಹನಿಧಿಗೆ ಸಲ್ಲಿಸುತ್ತಿರಬೇಕು. ಅವರಿಗೆ ಅಗತ್ಯ ಬಿದ್ದಾಗ ಆ ದಾಸೋಹ ನಿಧಿಯಿಂದ ತಮಗೆ ಬೇಕಾದಷ್ಟನ್ನು ತೆಗೆದುಕೊಳ್ಳುತ್ತಿರಬಹುದು. ಹೀಗಾಗಿ ಅನುಭವ ಮಂಟಪದ ಸಕ್ರಿಯ ಸದಸ್ಯರಿಗೆ ನಾಳೆಗೆ ಹೇಗೆ ಎಂಬ ಅಭದ್ರತೆ ಕಾಡುತ್ತಿರಲಿಲ್ಲ. ಪ್ರಮಥರೆಲ್ಲರಿಗೆ ಪ್ರಸಾದ ದಾಸೋಹ ಮಾಡಿಸಬೇಕೆಂಬ ಹಂಬಲ ಹೊಂದಿದ್ದ ಮಾರಯ್ಯ-ಲಕ್ಕಮ್ಮ ಅಂದು ತಮ್ಮದೇ ದಾಸೋಹ ಎಂದು ಆಹ್ವಾನಿಸಿ ಸೇವಾ ಕರ್ತರಾಗಿ ಕೆಲಸ ಮಾಡಿರಬಹುದು.

ಇಲ್ಲಿ ಒಂದು ಮಾರ್ಮಿಕ ದೃಷ್ಟಾಂತ ನೆನಪಿಗೆ ಬರುತ್ತದೆ. ಒಂದು ದೊಡ್ಡ ಕಾರ್ಯಕ್ರಮ ನಡೆಯುತ್ತಿತ್ತು. ಪೂಜ್ಯ ಸ್ವಾಮಿಗಳ ನೇತೃತ್ವದಲ್ಲಿ ಬೃಹತ್ ಗಣ ದಾಸೋಹ ಸಾಗುತ್ತಿತ್ತು. ಆಗ ಒಬ್ಬ ಬಡವ 1 ರೂ ತಂದು ಗುರುಗಳಿಗೆ ಕೊಟ್ಟು ಈ ಹಣದಿಂದ ಎಲ್ಲ ಶರಣ ಬಳಗಕ್ಕೂ ದಾಸೋಹ ಮಾಡಬೇಕು ಎಂದು ಬೇಡಿಕೊಂಡ. ಗುರುಗಳಿಗೆ ಮೊದಲು ಆಶ್ಚರ್ಯವೆನಿಸಿದರೂ ಅವರಿಗೆ ಒಂದು ಉಪಾಯ ಹೊಳೆಯಿತು. ಆ ಒಂದು ರೂಪಾಯಿಗೆ ಕೊತ್ತುಂಬರಿ ಸೊಪ್ಪು ತರಿಸಿ ತಯಾರಾಗುತ್ತಿರುವ ಸಾರಿನ ಕೊಳಗದಲ್ಲಿ ಅದನ್ನು ಹಾಕಿಸಿದರು. ಇದರಿಂದ ಆ ಬಡಭಕ್ತನ ಕೊಡುಗೆ ನೆರೆದ ಇಡೀ ಸಮೂಹಕ್ಕೆ ಲಭ್ಯವಾಯಿತು.

ಇದೇ ರೀತಿ ಆಯ್ದಕ್ಕಿ ಮಾರಯ್ಯ -ಲಕ್ಕಮ್ಮರ ಕೊಡುಗೆಯೂ ಎಲ್ಲ ಶರಣರಿಗೆ ಸಲ್ಲಿರಬೇಕು ಎನ್ನಿಸುತ್ತದೆ. ಇದಕ್ಕೆ ಸಹಾಯಕವಾದುದು ಮಹಾಮನೆಯ ದಾಸೋಹ ನಿಧಿ. ಹೀಗಾಗಿ ಶರಣರಿಗೆ ಬಡತನದ ಭಯವಾಗಲಿ, ಅನುವು ಆಪತ್ತಿನ ಭಯವಾಗಲಿ ಇರಲಿಲ್ಲ. ತಮ್ಮಲ್ಲಿದ್ದುದನ್ನು ದಾಸೋಹ ನಿಧಿಗೆ ಕೊಡುತ್ತಿದ್ದರು. ತಮಗೆ ಅವಶ್ಯವೆನಿಸಿದಾಗ ದಾಸೋಹನಿಧಿಯಿಂದ ಪಡೆಯುತ್ತಿದ್ದರು. ''ನನ್ನದು'' ಎಂದು ಯಾರೂ ಯಾವುದನ್ನೂ ಸಂಗ್ರಹಿಸಿ ಇಟ್ಟುಕೊಳ್ಳುವ ಆವಶ್ಯಕತೆ ಶರಣರಿಗೆ ಕಾಣಬರುತ್ತಿರಲಿಲ್ಲ. ಇಂಥ ಆದರ್ಶ ವ್ಯವಸ್ಥೆಯ ದುರುಪಯೋಗವನ್ನು ಕೆಲವರು ಮಾಡಿಕೊಳ್ಳು -ತ್ತಿದ್ದಿರಬಹುದು. ಅಂಥ ಅಲ್ಪಾಕಾಂಕ್ಷಿಗಳು ದಾಸೋಹ ನಿಧಿಯಿಂದ ಹಣ ಸಿಗುತ್ತದೆಂದು ತಮ್ಮ ಸಾಲ ತೀರಿಸಲು ಅಥವಾ ತಮ್ಮ ದಾರಿದ್ರ್ಯ ಪರಿಹರಿಸಿಕೊಳ್ಳಲು ಲಿಂಗಧಾರಣೆ ಮಾಡಿಕೊಂಡು (ತೋರಿಕೆಯ) ಭಕ್ತರಾಗುತ್ತಿದ್ದರು ಅಂತ ಕಾಣುತದೆ. ಅಂಥವರನ್ನು ಕಂಡು ಗುರು ಬಸವಣ್ಣನವರು ''ಕಾಲ ಸಾಲ ದಾರಿದ್ರ್ಯಕ್ಕಂಜಿ ದೇವರನ್ನು ಆಶ್ರಯಿಸುತ್ತಾರಲ್ಲ!'' ಎಂದು ವಿಷಾದಿಸುತ್ತಿದ್ದರು. ಯಾರದ್ದು

ನಿಜ ಭಕ್ತಿ ಎಂದು ತಿಳಿಯುವುದು? ಎಂದು ಚಿಂತಿಸುತ್ತಿದ್ದರು. ಮತ್ತೊಂದು ದಿಕ್ಕಿನಿಂದ ಆಲೋಚಿಸಿ, ಇಂಥ ಭಕ್ತಿಯನ್ನು ಕಿರಿದು, ಹೀನ ಎನ್ನಲಾದೀತೆ? ಎಂದುಕೊಳ್ಳುತ್ತಿದ್ದರು. ಏಕೆಂದರೆ, ಜೀವನಾವಶ್ಯಕತೆಗಳನ್ನು ಪೂರೈಸುವುದೂ ಧರ್ಮದ ಕರ್ತವ್ಯವಲ್ಲವೆ ಎಂದು ಆಲೋಚಿಸುತ್ತಿದ್ದರು. ಆದ್ದರಿಂದ ತಪ್ಪು ಒಪ್ಪುಗಳನ್ನು ನಿರ್ಣಯಿಸುವವನು, ತೀರ್ಪು ಕೊಡುವವನು ನಾನಲ್ಲ ನೀನು ಎಂದು ದೇವನಿಗೆ, 'ಇದ ನೀನೆ ಬಲ್ಲೆಯಯ್ಯಾ' ಎನ್ನುವ ಮಾತಿನ ಮೂಲಕ ಹೇಳುತ್ತಾರೆ.

ಶರಣರನ್ನು, ಭಕ್ತರನ್ನು ಅಳೆಯಲು ನಾನಾರು? ನಾನೇ ವೇಷಧಾರಿ, ಹೊಟ್ಟೆ ಹೊರೆಯಲು ದೇವರನ್ನು , ಧರ್ಮವನ್ನು ಆಶ್ರಯಿಸಿದವನಾಗಿರಬಹುದು. ಎಂದು ಅಂದುಕೊಳ್ಳುತ್ತಾರೆ.

298. ಅಜ್ಞಾನಿಗಳೊಡನೆ ಮೌನಲೇಸು

ಮೂಗ ಕಂಡ ಕನಸಿನಂತಾಯಿತೆನ್ನ ಭಕ್ತಿ;
ಗುಣವ ಹೇಳಬಾರದಾರಿಗೆಯೂ; ಕೇಳಲೆಂತೂ ಬಾರದು!
ಎನ್ನ ಹೇಗತನವ ಮಾಣಿಸು, ಲಿಂಗದೇವಾ. - ಬ.ವ.ದೀ.296

ಮೂಕನು ಕನಸುಗಳನ್ನು ಕಾಣುತ್ತಾನೆ. ಸುಖ ದುಃಖಗಳನ್ನು ಅನುಭವಿಸುತ್ತಾನೆ. ಆದರೆ ಅವನ್ನು ಹೇಳಲಾರ. ಹಾಗೆಯೇ ಅನುಭಾವಿಯ ಸ್ಥಿತಿಯೂ ಕೂಡ. ಅವನು ದೇವನ ಒಲುಮೆಯನ್ನು ಅನುಭವಿಸುತ್ತಾನೆ, ಆನಂದಿಸುತ್ತಾನೆ. ಆದರೆ ಇದನ್ನು ಇತರ ಲೌಕಿಕರಿಗೆ ಹೇಳಹೋದರೆ ಅವರು ಅಪಹಾಸ್ಯ ಮಾಡುತ್ತಾರೆ. ತನ್ನ ಅನುಭವವನ್ನು ಹೇಳಹೋದರೂ ಅಷ್ಟೆ, ಅವರಿಗೆ ಇಂಥದರಲ್ಲಿ ಏಕೆ ಆಸಕ್ತಿ ಇಲ್ಲ ಎಂದು ಕೇಳ ಹೋದರೆಯೂ ಅಷ್ಟೆ.

(ಲಿಂಗದೇವನ ಪ್ರಸಂಗವೂ ಹೀಗೆ ಇದೆ. ತತ್ವಜ್ಞಾನ (philosophy) ದರ್ಶನ (Mysticism) ಅರ್ಥವಾಗದವರಿಗೆ ಅಂಥ ವಿಷಯ ಅರ್ಥವಾಗುವುದೇ ಇಲ್ಲ. ಇಡೀ ಜೀವಮಾನದಲ್ಲಿ ಒಂದು ವಚನವನ್ನು ಓದದವರು ಸಹ ಈ ಬಗ್ಗೆ ನಿರ್ಣಯ ಕೊಡಲು ಉತ್ಸುಕರಾಗಿರುತ್ತಾರೆ)

ಆದ್ದರಿಂದ ''ನನ್ನ ಮನಸ್ಸಿನ ತುಡಿತಕ್ಕಾಗಿ ದಿವ್ಯಾನುಭವದ ಬಗ್ಗೆ ಇನ್ನಿತರರೊಡನೆ ಚರ್ಚಿಸಲು ಹೋಗುವ ಮೂರ್ಖತನ (ಹೇಗತನ) ವನ್ನು ನಿವಾರಿಸು.'' ಎಂದು ಲಿಂಗದೇವನಲ್ಲಿ ಗುರು ಬಸವಣ್ಣನವರು ಬೇಡಿಕೊಳ್ಳುತ್ತಾರೆ.

299. ಅಲ್ಪದ ಲೋಭ ಮಾಡುವ ಅಧಿಕ ಹಾನಿ

ಕಾಣೆಯ ಲೋಭ ಕೋಟಿಯ ಲಾಭವ ಕೆಡಿಸಿದುದ ನಾನರಿಯೆನಯ್ಯಾ
ಭಕ್ತಿಯ ಕುಳವನರಿಯದೆ ಮತಿಗೆಟ್ಟ ಪರಿಯ ನಾನರಿಯೆನಯ್ಯಾ
ಲಿಂಗದೇವನ ಶರಣರ ಸಂಗದಿಂದ ಅರಿದಡೆ
ನಾನು ಬದುಕುವೆನಯ್ಯಾ. - ಬ.ವ.ದೀ.297

ಬಹಳಷ್ಟು ಸಲ ಒಂದು ಕಾಣೆಯಷ್ಟನ್ನು ಉಳಿಸಲು ಮಾಡುವ ಲೋಭವು ಕೋಟಿ ರೂಗಳ ಲಾಭವನ್ನೇ ಕೆಡಿಸುತ್ತದೆ ಎಂಬುದನ್ನು ಬಹಳ ಜನ ಅರಿಯರು. ಒಬ್ಬ ವ್ಯಕ್ತಿ ಸಿರಿವಂತ, ಉದಾರಿ. ಬೇಕಾದಷ್ಟು ದಾನಧರ್ಮ ಮಾಡಿ ಪುಣ್ಯ ಗಳಿಸುತ್ತಿರುತ್ತಾನೆ. ಇಷ್ಟಲಿಂಗ ಪೂಜೆಯನ್ನು ನಿಷ್ಠೆಯಿಂದ ಮಾಡುತ್ತಾನೆ. ಆದರೆ ಹಸಿದು ಬಂದ ಬಡವನಿಗೆ, ಜಂಗಮನಿಗೆ ಉಣಲಿಕ್ಕದೆ ಅಥವಾ ಯಾರೋ ಬಡವನಿಗೆ ಮೋಸ ಮಾಡಿ ತಾನು ಅವರೆಗೆ ಮಾಡಿದ ಪುಣ್ಯವನ್ನೆಲ್ಲ ಕಳೆದುಕೊಳ್ಳುತ್ತಾನೆ. ಆದ್ದರಿಂದ ನಿಜ ಶರಣನು ಭಕ್ತಿಯ ರಹಸ್ಯವನ್ನು ಅರಿಯುವುದು ಬಲು ಮುಖ್ಯ. ಅರಿಯಲಾರದವನು ಮತಿ ಗೆಟ್ಟವನಾಗುತ್ತಾನೆ. ಅದಕ್ಕಾಗಿ ಧರ್ಮಪಿತ ಬಸವಣ್ಣನವರು ಹೇಳುತ್ತಾರೆ, ಭಕ್ತಿಯ ಸೂಕ್ಷ್ಮತೆಯನ್ನು ರಹಸ್ಯವನ್ನು ಶರಣರ ಸಂಗದಿಂದ ಮಾತ್ರ ನಾವು ಅರಿಯಲು ಸಾಧ್ಯ. ವಿಶಿಷ್ಟ ಸಂದರ್ಭಗಳಲ್ಲಿ ಶರಣರು ಯಾವ ರೀತಿ ವರ್ತಿಸುವರು ಎಂಬುದು ಇನ್ನಿತರರಿಗೆ ಮಾರ್ಗದರ್ಶನ ಮಾಡುತ್ತದೆ.

ಶರಣ ಮೇಳದ ದೇಣಿಗೆ ಸಂಗ್ರಹ.

ಶರಣ ಬಂಧುಗಳೇ, ಶರಣ ಮೇಳದ ದೇಣಿಗೆ ಸಂಗ್ರಹಕ್ಕೆ ರಸೀತಿ ಪುಸ್ತಕ ಬರದೆ ಇದ್ದರೆ ಪತ್ರ ಬರೆದು, ಅಥವಾ ದೂರವಾಣಿ ಕರೆ ಮಾಡಿ, ತರಿಸಿಕೊಂಡು ದೇಣಿಗೆ ಸಂಗ್ರಹ ಮಾಡಿರಿ. ಕಾಳು -ಬೇಳೆ ದವಸ ಧಾನ್ಯ ತೀರಾ ತುಟ್ಟಿಯಾಗಿವೆ. ಹೆಚ್ಚಿನ ದೇಣಿಗೆ ಸಂಗ್ರಹಿಸಬೇಕೆಂದು ಸಂಕಲ್ಪ ಮಾಡಿರಿ.

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2010 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ಮೂರನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ
ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2010ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 23 ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2010 ನೆಯ ಇಸವಿಯ 23 ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು
16-10-2009

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
1.	01-11-2009	ದೇವ(ಭಾನು)ವಾರ	ವಿಜಯಪುರ
2.	02-11-2009	ಶಿವ(ಸೋಮ)ವಾರ	ಹೊಸಕೋಟೆ
3.	03-11-2009	ಬಸವ(ಮಂಗಳ)ವಾರ	ಅಟ್ಟೂರು
4.	04-11-2009	ಚೆನ್ನ(ಬುಧ)ವಾರ	ತುರುವೇಕೆರೆ
5.	05-11-2009	ಪ್ರಭು(ಗುರು)ವಾರ	ತುರುವೇಕೆರೆ
6.	06-11-2009	ಮಾತೃ(ಶುಕ್ರ)ವಾರ	ರಾಮಡಿಹಳ್ಳಿ
7.	07-11-2009	ಶರಣ(ಶನಿ)ವಾರ	ನಾಗರಘಟ್ಟ
8.	08-11-2009	ದೇವ(ರವಿ)ವಾರ	ಚಿಕ್ಕಮಗಳೂರು
9.	09-11-2009	ಶಿವ(ಸೋಮ)ವಾರ	,,
10.	10-11-2009	ಬಸವ(ಮಂಗಳ)ವಾರ	,,
11.	11-11-2009	ಚನ್ನ(ಬುಧ)ವಾರ	,,
12.	12-11-2009	ಪ್ರಭು(ಗುರು)ವಾರ	ಭದ್ರಾವತಿ
13.	13-11-2009	ಮಾತೃ(ಶುಕ್ರ)ವಾರ	,,
14.	14-11-2009	ಶರಣ(ಶನಿ)ವಾರ	ಶಿವಮೊಗ್ಗ
15.	15-11-2009	ದೇವ(ಭಾನು)ವಾರ	ಕೊಮ್ಮನಾಳ
16.	16-11-2009	ಶಿವ(ಸೋಮ)ವಾರ	ದಾವಣಗೆರೆ
17.	17-11-2009	ಬಸವ(ಮಂಗಳ)ವಾರ	ಚಿತ್ರದುರ್ಗ
18.	18-11-2009	ಚನ್ನ(ಬುಧ)ವಾರ	ಚಳ್ಳಕೆರೆ
19.	19-11-2009	ಪ್ರಭು(ಗುರು)ವಾರ	ಉಡೇಗೊಳ
20.	20-11-2009	ಮಾತೃ(ಶುಕ್ರ)ವಾರ	ದೊಡ್ಡಉಳ್ಳಾರ್ತಿ
21.	21-11-2009	ಶರಣ(ಶನಿ)ವಾರ	ಚಿತ್ರನಾಯಕನ ಹಳ್ಳಿ
22 .	22-11-2009	ದೇವ(ಭಾನು)ವಾರ	ಬಳ್ಳಾರಿ
23.	23-11-2009	ಶಿವ(ಸೋಮ)ವಾರ	ಶಿರಗುಪ್ಪ
24.	24-11-2009	ಬಸವ(ಮಂಗಳ)ವಾರ	ರಾಯಚೂರು
25.	25-11-2009	ಚನ್ನ(ಬುಧ)ವಾರ	ಗಂಗಾವತಿ
26.	26-11-2009	ಪ್ರಭು(ಗುರು)ವಾರ	ಕೊಪ್ಪಳ
27.	27-11-2009	ಮಾತೃ(ಶುಕ್ರ)ವಾರ	,,
28.	28-11-2009	ಶರಣ(ಶನಿ)ವಾರ	,,
29.	29-11-2009	ದೇವ(ರವಿ)ವಾರ	ಹುಬ್ಬಳ್ಳಿ
30.	30-11-2009	ಶಿವ(ಸೋಮ)ವಾರ	ಧಾರವಾಡ
31.	01-12-2009	ಬಸವ(ಮಂಗಳ)ವಾರ	ಅವರಾದಿ
32.	02-12-2009	ಚನ್ನ(ಬುಧ)ವಾರ	ಸವದತ್ತಿ
33.	03-12-2009	ಪ್ರಭು(ಗುರು)ವಾರ	,,
34.	04-12-2009	ಮಾತೃ(ಶುಕ್ರ)ವಾರ	ಬೈಲಹೊಂಗಲ
35.	05-12-2009	ಶರಣ(ಶನಿ)ವಾರ	,,
36.	06-12-2009	ದೇವ(ರವಿ)ವಾರ	ಬೆಳಗಾವಿ
37.	07-12-2009	ಶಿವ(ಸೋಮ)ವಾರ	ಬೆಳಗಾವಿ
38.	08-12-2009	ಬಸವ(ಮಂಗಳ)ವಾರ	ಸಂಕೇಶ್ವರ

39.	09-12-2009	ಚನ್ನ(ಬುಧ)ವಾರ	ಗಡಹಿಂಗ್ಲಾಜ್
40.	10-12-2009	ಪ್ರಭು(ಗುರು)ವಾರ	ಗೋಕಾಕ್
41.	11-12-2009	ಮಾತೃ(ಶುಕ್ರ)ವಾರ	,,
42.	12-12-2009	ಶರಣ(ಶನಿ)ವಾರ	,,
43.	13-12-2009	ದೇವ(ರವಿ)ವಾರ	,,
44.	14-12-2009	ಶಿವ(ಸೋಮ)ವಾರ	ಶೇಗುಣಸಿ
45.	15-12-2009	ಬಸವ(ಮಂಗಳ)ವಾರ	ಖವಟಕೊಪ್ಪ
46.	16-12-2009	ಚನ್ನ(ಬುಧ)ವಾರ	ತಾಂವಶಿ
47.	17-12-2009	ಪ್ರಭು(ಗುರು)ವಾರ	ಅಥಣಿ
48.	18-12-2009	ಮಾತೃ(ಶುಕ್ರ)ವಾರ	ಅಡಹಳಹಟ್ಟಿ
49.	19-12-2009	ಶರಣ(ಶನಿ)ವಾರ	ಕನಮಡಿ
50.	20-12-2009	ದೇವ(ರವಿ)ವಾರ	ಗುಡ್ಡಾಪುರ
51.	21-12-2009	ಶಿವ(ಸೋಮ)ವಾರ	ಬಿಜಾಪುರ
52.	22-12-2009	ಬಸವ(ಮಂಗಳ)ವಾರ	ಕಗ್ಗೋಡ
53.	23-12-2009	ಚನ್ನ(ಬುಧ)ವಾರ	ಗುಲಬರ್ಗಾ
54.	24-12-2009	ಪ್ರಭು(ಗುರು)ವಾರ	,,
55.	25-12-2009	ಮಾತೃ(ಶುಕ್ರ)ವಾರ	ಯಲಮಾಮಿಡಿ
56.	26-12-2009	ಶರಣ(ಶನಿ)ವಾರ	ಉದಗೀರ್
57.	27-12-2009	ದೇವ(ರವಿ)ವಾರ	ಸಂಗಮ
58.	28-12-2009	ಶಿವ(ಸೋಮ)ವಾರ	ಬೀದರ್
59.	29-12-2009	ಬಸವ(ಮಂಗಳ)ವಾರ	,,
60.	30-12-2009	ಚನ್ನ(ಬುಧ)ವಾರ	,,
61.	31-12-2009	ಪ್ರಭು(ಗುರು)ವಾರ	ಜಹಿರಾಬಾದ್
62.	01-01-2010	ಮಾತೃ(ಶುಕ್ರ)ವಾರ	ಹೈದ್ರಾಬಾದ್
63.	02-01-2010	ಶರಣ(ಶನಿ)ವಾರ	,,
64.	03-01-2010	ದೇವ(ರವಿ)ವಾರ	,,
65.	04-01-2010	ಶಿವ(ಸೋಮ)ವಾರ	,,
66.	05-01-2010	ಬಸವ(ಮಂಗಳ)ವಾರ	,,
67.	06-01-2010	ಚನ್ನ(ಬುಧ)ವಾರ	,,
70.	07-01-2010	ಪ್ರಭು(ಗುರು)ವಾರ	,,
71.	08-01-2010	ಮಾತೃ(ಶುಕ್ರ)ವಾರ	,,
72.	09-01-2010	ಶರಣ(ಶನಿ)ವಾರ	,,
73.	10-01-2010	ದೇವ(ಭಾನು)ವಾರ	ಕೂಡಲ ಸಂಗಮಕ್ಕೆ ಪ್ರಯಾಣ

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಶರಣ ಭೂಮಿ ಬಸವ ಕಲ್ಯಾಣದ ಶರಣ ಶೈಲದ ಮೇಲೆ
108 ಅಡಿ ಗುರು ಬಸವಣ್ಣನವರ ಪುತ್ಥಳಿ
ಧನ ಸಹಾಯಕ್ಕಾಗಿ ಬಿನ್ನಹ



ಬಸವ ಧರ್ಮ ಪೀಠದ ಶರಣ ಲೋಕದಲ್ಲಿ ತ್ವರಿತಗತಿಯಿಂದ ಕಟ್ಟಡ ನಿರ್ಮಾಣ ಕಾರ್ಯ ಸಾಗಿರುವುದು ಸರ್ವ ವೇದ್ಯವಷ್ಟೆ. ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಕೆಲಸವು ಅರ್ಧಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಪೂರೈಸಿದ್ದು, ಇನ್ನು ಒಂದು ವರ್ಷದಲ್ಲಿ ಅದು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

1. ಒಂದು ಲಕ್ಷ ರೂ ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು. ಅಲ್ಲದೆ ದಾನಿಗಳ ಅಥವಾ ಅವರು ಸೂಚಿಸಿದವರ ಭಾವಚಿತ್ರವನ್ನು ಪ್ರದರ್ಶಿಸಲಾಗುವುದು.
2. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
3. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
4. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನ ಮೇಲೆ ಬರೆಸಲಾಗುವುದು.

ಈಗಾಗಲೇ ಅನೇಕರು ತಮ್ಮ ಶಕ್ತ್ಯಾನುಸಾರ ದೇಣಗೆ ಕೊಟ್ಟಿರಬಹುದು. ಕೆಲಸವು ಹಾಕಿಕೊಂಡ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ಸಾಗುತ್ತಿರುವುದರಿಂದ ಈಗ ಕೊಟ್ಟವರು ಇನ್ನೂ ಹೆಚ್ಚಿನ ಮೊತ್ತವನ್ನು ಕೊಡಬಹುದು. ಮೂರ್ತಿಗೆ ಆಕಾರ ಕೊಡುವ ಕೆಲಸ ನಡೆದಿರುವುದರಿಂದ ಹಣವು ತ್ವರಿತಗತಿಯಲ್ಲಿ ಬೇಕಾಗಿದೆ.

ಗುರು ಬಸವಣ್ಣನವರ ಜೀವನ ಚರಿತ್ರೆ ಚಿತ್ರಣ

1. ಗುರು ಬಸವಣ್ಣನವರ 108 ಅಡಿ ಪುತ್ಥಳಿಗೆ 24 ಅಡಿ ಎತ್ತರದ ಅಡಿಪಾಯವಿದೆ. ಇಲ್ಲಿ ಧರ್ಮಪಿತರ ಜೀವನದ ಪ್ರಮುಖ ಘಟ್ಟಗಳನ್ನು ಮೂರ್ತಿಗಳ ಮೂಲಕ ಚಿತ್ರಿಸುವ ಯೋಜನೆ ಇದೆ. ಒಂದು ಅಂಕಣದಲ್ಲಿ ಒಂದು ಘಟನೆ ಅಥವಾ ಪ್ರಸಂಗವಿರುತ್ತದೆ. ಒಂದೊಂದು ಘಟನೆಯ ಚಿತ್ರಣಕ್ಕೆ ಒಂದೂವರೆ ಲಕ್ಷ ಖರ್ಚು ಬರಲಿದೆ. (ಮುರ್ಡೇಶ್ವರದಲ್ಲಿ ರಾವಣನ ಜೀವನದ ಪ್ರಸಂಗಗಳು, ಶಿವನ ಲೀಲೆಗಳನ್ನು ಚಿತ್ರಿಸಿರುವುದು ನಮ್ಮ ಯೋಜನೆಗೆ ಪ್ರೇರಣೆ) ಇದನ್ನು ಒಬ್ಬರೇ ದಾನಿಗಳು ವಹಿಸಿಕೊಳ್ಳಬಹುದು. ಅಥವಾ ಇಬ್ಬರು - ಮೂವರು ಸೇರಿ ವಹಿಸಿಕೊಳ್ಳಬಹುದು. ಅಥವಾ ಒಂದೊಂದು ರಾಷ್ಟ್ರೀಯ ಬಸವ ದಳದಿಂದ ಅಥವಾ ಒಂದೊಂದು ಊರಿನಿಂದ ಸಂಗ್ರಹಿಸಿ ದೇಣಿಗೆ ನೀಡಬಹುದು.

2. ಶರಣ ಗ್ರಾಮ: ವಿವಿಧ ಕಾಯಕದ ಶರಣರನ್ನು ಅವರ ಪರಿಸರದ ಜೊತೆಗೆ ಚಿತ್ರಿಸುವ ಕೆಲಸ ಆರಂಭವಾಗಿದೆ. ಒಬ್ಬ ಶರಣರ ಅಂಥ ಚಿತ್ರಣಕ್ಕೆ ಅಂದಾಜು 50,000 (ಐವತ್ತು ಸಾವಿರ) ರೂ ವೆಚ್ಚವಾಗುವುದು. ಕೊಟ್ಟವರ ಹೆಸರಿನ ನಾಮಫಲಕವನ್ನು ಹಾಕಲಾಗುವುದು.

3. ಅಕ್ಕಮಹಾದೇವಿ ಗವಿ: ಜಗನ್ಮಾತಾ ಅಕ್ಕಮಹಾದೇವಿ ಹೆಸರಿನಲ್ಲಿ ಒಂದು ಬೃಹತ್ ಗವಿಯನ್ನು ಕೆತ್ತಿಸಲಾಗಿದ್ದು ಇದರಲ್ಲಿ ಇದರಲ್ಲಿ 30 ಜನ ವಚನಕಾರ್ತಿ ಶರಣೆಯರ ಮೂರ್ತಿಗಳನ್ನು ಕೂರಿಸುವ ಉದ್ದೇಶವಿದೆ. ಒಬ್ಬೊಬ್ಬ ಶರಣೆಯ ಮೂರ್ತಿ ಆಕೆಯ ಪರಿಸರದೊಡನೆ ಚಿತ್ರಿಸಲು 25,000 (ಇಪ್ಪತ್ತೈದು ಸಾವಿರ) ರೂಗಳ ವೆಚ್ಚ ತಗುಲಲಿದೆ. ದಾನಿಗಳು ದೇಣಿಗೆ ಕೊಟ್ಟರೆ ಅಲ್ಲಿ ಅವರ ನಾಮಫಲಕವನ್ನು ಹಾಕಲಾಗುವುದು.

4. ಸರೋವರ: ಗುರು ಬಸವಣ್ಣನವರ ಪುತ್ಥಳಿಯ ಮುಂಭಾಗದಲ್ಲಿ ಒಂದು ಕೊಳವನ್ನು (ಅಂದಾಜು ವೆಚ್ಚ 5 ಲಕ್ಷ) ಮಾಡಿ, ಐಕ್ಯ ಮಂಟಪವನ್ನು (ಅಂದಾಜು ವೆಚ್ಚ 3 ಲಕ್ಷ) ನಿರ್ಮಿಸಲಾಗುತ್ತಿದೆ. ಇಡೀ ವೆಚ್ಚವನ್ನು ಒಬ್ಬರೇ ವಹಿಸಿಕೊಳ್ಳಬಹುದು. ಅಥವಾ ಇಬ್ಬರು ಪ್ರತ್ಯೇಕವಾಗಿ ವಹಿಸಿಕೊಳ್ಳಬಹುದು.

ಸ್ವಯಂ ಪ್ರೇರಣೆಯಿಂದ ಕಟ್ಟಡ ನಿಧಿಗೆ ಶಕ್ತ್ಯಾನುಸಾರ ಮತ್ತು ಭಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು.

ಸಾಲದ ರೂಪದಲ್ಲಿ ಧನ ಸಹಾಯ

ಬೃಹತ್ ಪುತ್ಥಳಿಯ ಕೆಲಸವು ಬಹು ತೀವ್ರಗತಿಯಲ್ಲಿ ನಡೆದಿರುವ ಕಾರಣ ಹಣದ ವ್ಯವಸ್ಥೆಯನ್ನು ಮಾಡುವುದು ಅಗತ್ಯವಿದೆ. ಈ ಹಿಂದೆ 2006ರಲ್ಲಿ ನವ ದೆಹಲಿಯಲ್ಲಿ (ಬಸವ ಮಂಟಪ) ಕಟ್ಟಡ ಖರೀದಿ ಮಾಡುವಾಗ ಶರಣ ಬಂಧುಗಳು ಸಾಲ ರೂಪದಲ್ಲಿ ಹಣವನ್ನು ಒದಗಿಸಿದರು. ಒಂದೂವರೆ ತಿಂಗಳಲ್ಲೇ ಸಾಲ ರೂಪದಲ್ಲಿ ಹಣವನ್ನು ಸಂಗ್ರಹಿಸಿ ಕಟ್ಟಡವನ್ನು ಖರೀದಿಸಲಾಯಿತು. ಆ ಸಾಲದಲ್ಲಿ ಶೇಕಡಾ 80ರಷ್ಟು ತೀರಿಸಲಾಗಿದೆ. ಶರಣ ಬಂಧುಗಳ ಇಚ್ಛೆಯಂತೆ ಉಳಿದುದನ್ನು ಅವರು ಕೇಳಿದಾಗ ಕೊಡಲಾಗುವುದು. ಅದೇ ರೀತಿ ಈಗಲೂ ಶರಣ ಬಂಧುಗಳು ಸಾಲದ ರೂಪದಲ್ಲಿ ಬಸವ ಧರ್ಮ ಪೀಠ ಟ್ರಸ್ಟಿಗೆ ಹಣವನ್ನು ಕೊಡಬಹುದು. ಅದಕ್ಕೆ 12% ಬಡ್ಡಿಯನ್ನು ಸಹ ಕೊಡಲಾಗುವುದು. ತಮಗೆ ಹಣ ಅಗತ್ಯವೆನಿಸಿದಾಗ ಒಂದು ತಿಂಗಳು ಮೊದಲೇ ಬೇಡಿಕೆ ಸಲ್ಲಿಸಿದರೆ ಅವರಿಗೆ ಹಣವನ್ನು ವಾಪಸ್ಸು ನೀಡಲಾಗುವುದು. ಸಾಲ ನೀಡುವುದೂ ಸಹ ಉಪಕಾರದ ಕೆಲಸ ಎಂದು ಭಾವಿಸಿ, ಆರ್ಥಿಕ ಶಕ್ತಿ ಇರುವವರು ಸಾಲ ಕೊಡಲು ಮುಂದೆ ಬರಬೇಕೆಂದು ವಿನಂತಿಸುತ್ತೇವೆ.

ವಿ.ಸೂ: ಸಾಲದ ಹಣಕ್ಕೆ ರಸೀತಿ ಕೊಡಲಾಗುವುದು.

ಸಂಪರ್ಕಿಸುವ ವಿಳಾಸಗಳು

ಬೆಂಗಳೂರು ವಿಳಾಸ :
ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್ (ರಿ.)
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.) ಟ್ರಸ್ಟ್
ಬಸವ ಮಹಾಮನೆ, ಬಸವಕಲ್ಯಾಣ- 585 327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್
☎ : 08481-251921/252856



ಸಮುದಾಯ ಪ್ರಾರ್ಥನೆ ಮತ್ತು ಶರಣ ವಂದನೆ


ದಿ.3-10-2009ರಂದು ಸಂಜೆ ನಡೆದ ಧರ್ಮ ಚಿಂತನಗೋಷ್ಠಿಯ ಉದ್ಘಾಟನೆ ಮಾಡುತ್ತಿರುವ ಔರಾದ ಶಾಸಕ ಪ್ರಭು ಚವ್ಹಾಣ ಮತ್ತು ರಾಷ್ಟ್ರೀಯ ಬಸವ ದಳದ ಗಣ್ಯರು









CPMG/KA/BGW50/2009-2011-WPP(W) 17 R.No. 19980/70